# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 22-12-2023ರ ಶುಕ್ರವಾರ ಪೂರ್ವಾಹ್ನ 10-30 ಗಂಟೆಗೆ ನಡೆದ "ಆರನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡಾವಳಿ.

**ಉಪಸ್ಥಿತರು:**

1. ಪ್ರೊ. ಎನ್.ಕೆ.ಲೋಕನಾಥ್ — ಕುಲಪತಿ ಹಾಗೂ ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ ಪ್ರೊ. ಎ.ಹೆಚ್.ಎಂ. ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ — ಸದಸ್ಯರು
3. ಶ್ರೀ ಸುರೇಶ್, ಕೆ.ಎ.ಎಸ್ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
4. ಪ್ರೊ. ಸೋನರ್ ನಂದಪ್ಪ — ಸದಸ್ಯರು
5. ಪ್ರೊ. ಟಿ.ಆರ್. ಮಾರುತಿ — ಸದಸ್ಯರು
6. ಡಾ. ಟಿ.ಆರ್. ಚಂದ್ರಶೇಖರ್, ಬಿ.ಇ., ಎಂಐಇ., ಎಂ.ಎ., ಪಿಎಚ್.ಡಿ., — ಸದಸ್ಯರು
7. ಶ್ರೀ ಕೆ. ಗೋಕುಲ್ ಗೋವರ್ಧನ್, ಎಲ್ಎಲ್‌ಬಿ., ಎಂಬಿಎ., — ಸದಸ್ಯರು
8. ಡಾ. ಸೌಮ್ಯ ಈರಪ್ಪ ಕೆ. — ಸದಸ್ಯರು
9. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ — ಸದಸ್ಯರು
10. ಡಾ. ಗಣೇಶ್ ಕೆ. — ಸದಸ್ಯರು
11. ಡಾ. ಮುಜೀದ ಬಾನು — ಸದಸ್ಯರು
12. ಪ್ರೊ. ಕೆ.ಎಂ. ಮಹದೇವನ್, ಕುಲಸಚಿವರು (ಪರೀಕ್ಷಾಂಗ) — ಸದಸ್ಯರು
13. ಶ್ರೀಮತಿ ವಿ.ಆರ್. ಶೈಲಜ, ಕೆ.ಎ.ಎಸ್., — ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ
14. ಶ್ರೀಮತಿ ರೇಖಾ ಕೆ.ಎಸ್., ಕೆ.ಎಸ್.ಎ.ಎಸ್., — ಹಣಕಾಸು ಅಧಿಕಾರಿಗಳು ವಿಶೇಷ ಆಹ್ವಾನಿತರು

**ಅನುಪಸ್ಥಿತರು:**

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ, ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಈ ಕೆಳಕಂಡ ಕಾರ್ಯಸೂಚಿಗಳನ್ನು ಕುಲಸಚಿವರು ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ದಿನಾಂಕ : 21-11-2023ರಂದು ಜರುಗಿದ "ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. | |

| | |
|---|---|
| ಸಾಮಾನ್ಯ ಸಭೆ 2023/5.4 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| | ಡಾ. ಚಂದ್ರಶೇಖರ್ ಅವರು ಮಾತನಾಡಿ ಕ್ರಿಶ್ಚಿಯಾನಿಟಿ ಪೀಠಕ್ಕೆ ಈಗಾಗಲೇ Dr. Fr. John Peter Lazaar SAC ಇವರು ಸಂದರ್ಶಕ ಪ್ರಾಧ್ಯಾಪಕರಾಗಿ ಒಂದು ವರ್ಷದವರೆಗೆ ಕಾರ್ಯನಿರ್ವಹಿಸಿರುತ್ತಾರೆ. ಇವರು ಮೂಲತಃ ತಮಿಳುನಾಡಿನವರಾದ್ದರಿಂದ ಇವರಿಗೆ ವಿಶ್ವವಿದ್ಯಾನಿಲಯದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆಯನ್ನು ಸಹ ಮಾಡಿಕೊಡಬೇಕಾಗುತ್ತದೆ. ಆದ್ದರಿಂದ Dr. Fr. Anthony Dhas Prakasam SAC ಅಥವಾ Dr. Fr. Joseph Marie ಇವರುಗಳು ಸ್ಥಳೀಯರಾಗಿದ್ದು, ನಮ್ಮ ಮೈಸೂರು ವಿಶ್ವವಿದ್ಯಾನಿಲಯದವರಾಗಿರುವುದರಿಂದ ಜೊತೆಗೆ ವಾಸ್ತವ್ಯದ ವ್ಯವಸ್ಥೆಯನ್ನು ಕಲ್ಪಿಸಬೇಕಾದ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಇವರಿಬ್ಬರಲ್ಲಿ ಯಾರಾದರೂ ಒಬ್ಬರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಬಹುದೆಂದು ತಿಳಿಸಿದರು. |
| ತೀರ್ಮಾನ | ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/5.14 | ಪ್ರೊ. ಸಿ. ನಾಗಣ್ಣ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಕೋರಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ ಪ್ರೊ. ಸಿ. ನಾಗಣ್ಣ ಅವರು ದಿನಾಂಕ 28.10.2022ರವರೆಗೂ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ಹಾಗೂ 15.10.2023ರಂದು 70 ವರ್ಷ ಪೂರ್ಣಗೊಂಡಿರುತ್ತದೆ. ಇವರು ಶೈಕ್ಷಣಿಕವಾಗಿ ಬಹಳ ಕೆಲಸವನ್ನು ಮಾಡಿದ್ದಾರೆ. ಜೊತೆಗೆ ವಿಶ್ವವಿದ್ಯಾನಿಲಯದ ಎಲ್ಲಾ ಕಾರ್ಯಕ್ರಮಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ ಜೊತೆಗೆ ಯುಜಿಸಿ ನಿಯಮಾವಳಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕಾರ ಹಾಗೂ 70 ವರ್ಷಗಳ ವಯೋಮಿತಿಗೆ ಒಳಪಟ್ಟು ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡಬೇಕಾಗುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಡಾ.ಚಂದ್ರಶೇಖರ್ ಅವರು ಮಾತನಾಡಿ ಕಳೆದ ತಿಂಗಳು ಸಿಂಡಿಕೇಟ್ ಸಭೆಯಲ್ಲಿ ಒಬ್ಬ ಪ್ರಾಧ್ಯಾಪಕರನ್ನು ಆಹ್ವಾನಿತ ಪ್ರಾಧ್ಯಾಪಕರನ್ನಾಗಿ ನೇಮಿಸಲು 70 ವರ್ಷ ಪೂರ್ಣಗೊಳ್ಳಲು 6 ತಿಂಗಳ ಕಾಲ ಅವಕಾಶವಿದ್ದರಿಂದ ಅವರನ್ನು ನಾವು ನಿಯಮಾನುಸಾರ ಅಂದರೆ 70 ವರ್ಷ ಪೂರ್ಣಗೊಳ್ಳುವುದರಿಂದ ನೇಮಿಸಲು ಸಾಧ್ಯವಾಗದ ಕಾರಣ ಅವರನ್ನು ಕೈಬಿಟ್ಟಿದ್ದೆವು. ಆದರೆ ಪ್ರೊ. ಸಿ. ನಾಗಣ್ಣರವರಿಗೆ 70 ವರ್ಷ ವಯಸ್ಸಾಗಿದೆ ಎಂದು ಕಾಣಿಸುವುದಿಲ್ಲ. ಜೊತೆಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದಿದ್ದಾರೆ. ಜೊತೆಗೆ ವಿಚಾರವಂತರು, ಉತ್ತಮ ವಾಗ್ಮಿಗಳಾಗಿದ್ದಾರೆ. ಇಂತವರು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಇರಬೇಕಾಗುತ್ತದೆ. 70 ವರ್ಷ ಪೂರ್ಣಗೊಂಡಿರುವುದರಿಂದ ನಿಯಮಾನುಸಾರ ಸಾಧ್ಯವಿದ್ದಲ್ಲಿ ಅವರನ್ನು ಮತ್ತೆ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ ಮಾಡಲು ಮಾನ್ಯ ಕುಲಪತಿಗಳ ವಿವೇಚನೆಗೆ ಬಿಡುವುದು ಒಳಿತು ಎಂದು ತಿಳಿಸಿದರು. |
| ತೀರ್ಮಾನ | ಪ್ರೊ. ಸಿ. ನಾಗಣ್ಣ ಅವರಿಗೆ 70 ವರ್ಷ ಪೂರ್ಣಗೊಂಡಿರುವುದರಿಂದ ಅವರನ್ನು ಮತ್ತೆ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ ಮಾಡಲು ಸಾಧ್ಯವಾಗುವುದಿಲ್ಲವೆಂದು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2023/5.32 | ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಕಾಲೇಜುಗಳು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಈ ಎರಡೂ ಕಡೆಯಲ್ಲಿ ಪೂರ್ಣ ಪ್ರಮಾಣದ ಕಾರ್ಯಭಾರವನ್ನು ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ. |
| | ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಕಾಲೇಜುಗಳು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಈ ಎರಡೂ ಕಡೆಯಲ್ಲಿ ಅತಿಥಿ ಉಪನ್ಯಾಸಕರು ಪೂರ್ಣ ಪ್ರಮಾಣದ ಕಾರ್ಯಭಾರವನ್ನು ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ. ವರದಿಯ ಪ್ರಕಾರ ಶೇ.80 ರಷ್ಟು ಅತಿಥಿ ಉಪನ್ಯಾಸಕರು ಎರಡೂ ಕಡೆ ಪೂರ್ಣ ಪ್ರಮಾಣದ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದಾರೆಂದು ತಿಳಿದು ಬಂದಿದೆ. ಇತ್ತೀಚಿನ ದಿನಗಳಲ್ಲಿ ಮಾನ್ಯ ಕುಲಪತಿಗಳು ಮಾಧ್ಯಮ ಗೋಷ್ಠಿಯಲ್ಲಿ ಇಂತಹ ಅತಿಥಿ ಉಪನ್ಯಾಸಕರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಿದ್ದು, ಇಂತಹ ಅತಿಥಿ ಉಪನ್ಯಾಸಕರುಗಳ ಮೇಲೆ ಕ್ರಮ ಕೈಗೊಂಡಿರುವ ಬಗ್ಗೆ ಮಾಹಿತಿ ನೀಡುವುದು. ಈ ರೀತಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಒಂದೇ ದಿನ ಒಂದೇ ಅವಧಿಯಲ್ಲಿ ಎರಡೂ ಕಡೆ ಬೋಧನಾ ತರಗತಿಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇಂತಹವರು ಪ್ರಾಂಶುಪಾಲರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕುತ್ತಾರೆ. ಇಂತಹ ಸಂದರ್ಭದಲ್ಲಿ ಹೆಸರಿಗಷ್ಟೆ ನಮಗೆ ದಾಖಲೆಗಳಲ್ಲಿ ಮಾತ್ರ ಬೋಧಕರಿದ್ದು, ವಾಸ್ತವವಾಗಿ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳನ್ನು ನೀಡುತ್ತಿಲ್ಲ. ಈ ವಿಷಯವು ವ್ಯಾಪಕವಾಗಿ ಪ್ರಚಾರ ಪಡೆದಿರುವುದರಿಂದ ಪ್ರವೇಶಾತಿಯಲ್ಲಿ ಕುಂಠಿತವಾಗುತ್ತಿದೆ. ಮಹಾರಾಜ ಕಾಲೇಜಿನಲ್ಲಿ ಕಳೆದ ವರ್ಷದಲ್ಲಿ ವಾಣಿಜ್ಯ ವಿಭಾಗದಲ್ಲಿ 8 ಸೆಕ್ಷನ್‌ಗಳಿದ್ದು, ಈ ವರ್ಷದಲ್ಲಿ 1 ಸೆಕ್ಷನ್ ಕಡಿಮೆಯಾಗಿ 7 ಸೆಕ್ಷನ್‌ಗಳಾಗಿವೆ. ಇದೇ ರೀತಿ ಯಾವ ಯಾವ ವಿಭಾಗಗಳಲ್ಲಿ ಪ್ರವೇಶಾತಿ ಕುಂಠಿತಗೊಂಡಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಕಲೆ ಹಾಕಬೇಕಾಗಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸುಧಾರಣೆಯನ್ನು ತರುವ ಸಂಬಂಧ ಶೇ. 80 ರಷ್ಟು ಎರಡು ಕಡೆ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳನ್ನು ತೆರವುಗೊಳಿಸಿ, ಅವರಿಂದ ತೆರವಾದಂತಹ ಅತಿಥಿ ಉಪನ್ಯಾಸಕರುಗಳ ಹುದ್ದೆಗೆ ವಯೋಮಿತಿ ಮೀರಿರುವಂತಹ ಉದ್ಯೋಗಕಾಂಕ್ಷೆಯುಳ್ಳವರಿಗೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುತ್ತಿರುವವರಿಗೆ ನೀಡಿರುವ 4 ಮತ್ತು 8 ಅವಧಿಯನ್ನು 12 ಗಂಟೆಗೆ ವಿಸ್ತರಿಸಿ ಅಂದರೆ ಪೂರ್ಣ ಅವಧಿಗೆ ನೇಮಿಸಿಕೊಂಡಲ್ಲಿ ಅತಿಥಿ ಉಪನ್ಯಾಸಕರುಗಳಿಗೂ ವಿದ್ಯಾರ್ಥಿಗಳಿಗೂ ಹಾಗೂ ಅತಿಥಿ ಉಪನ್ಯಾಸಕರುಗಳನ್ನೆ ಅವಲಂಬಿಸಿರುವ ವಿಶ್ವವಿದ್ಯಾನಿಯಕ್ಕೂ ಒಳಿತಾಗುವುದೆಂದು ತಿಳಿಸಿದರು.<br><br>ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ನಿಗದಿಗೊಳಿಸಿರುವ ಸಂಖ್ಯೆಗನುಗುಣವಾಗಿ ಪ್ರವೇಶಾತಿ ಪ್ರಮಾಣವು ಕುಂಠಿತವಾಗಿದೆ ಹಾಗೂ ಇಂತಹವರಿಂದ ಸೂಕ್ತ ವಿದ್ಯಾರ್ಹತೆ ಹೊಂದಿರುವ ಎಷ್ಟೋ ನಿರುದ್ಯೋಗಿ ಅಭ್ಯರ್ಥಿಗಳಿಗೆ ಕೆಲಸವಿಲ್ಲದ ಪರಿಸ್ಥಿತಿಯಲ್ಲಿ ಇನ್ನೊಂದು ಕಡೆ ಉದ್ಯೋಗ ವಯೋಮಿತಿ ಮೀರುತ್ತದೆ. ಇನ್ನೊಂದು ಕಡೆ ಕುಟುಂಬ ನಿರ್ವಹಣೆ ಕಷ್ಟವಾಗುತ್ತದೆ. ಇದರಿಂದ ಹಲವಾರು ಉದ್ಯೋಗಕಾಂಕ್ಷಿಗಳಿಗೂ ಹಾಗೂ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯವು ಹೆಚ್ಚಿನ ಮಟ್ಟದಲ್ಲಿ ಅತಿಥಿ ಉಪನ್ಯಾಸಕರುಗಳ ಮೇಲೆ ಅವಲಂಭಿತವಾಗಿದ್ದು, ಇಂತಹ ಸಮಸ್ಯೆಗಳಿಗೆ ಮೈಸೂರು ವಿಶ್ವವಿದ್ಯಾನಿಲಯವು ಒಂದು ಶಾಶ್ವತವಾದ ನಿರ್ಣಯ ತೆಗೆದುಕೊಳ್ಳಬೇಕು. ಅರ್ಹತೆಯಿರುವ ಅಭ್ಯರ್ಥಿಳಿಗೆ 04 ಮತ್ತು 08 ಗಂಟೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡುವ ಬದಲು ಒಬ್ಬರಿಗೆ 12 ಗಂಟೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿ ಪೂರ್ಣಾವಧಿ ಅತಿಥಿ ಉಪನ್ಯಾಸಕರೆಂದು ನೇಮಕ ಮಾಡಬಹುದು. ಎರಡೂ ಕಾಲೇಜುನಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ನೋಟಿಸ್ ಜಾರಿಗೊಳಿಸಬೇಕು. ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ಕೆಲವು ನಿಯಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು. ಮಹಾರಾಜ ಕಾಲೇಜಿನ ಕೆಲವು ಅತಿಥಿ ಉಪನ್ಯಾಸಕರುಗಳು ಕೋರ್ಟ್ ಮೊರೆಹೋಗಿದ್ದು, |

ಕೋರ್ಟ್ ರಜಾ ಅವಧಿಯಲ್ಲಿ ಇವರುಗಳನ್ನು ಬಿಡುಗಡೆ ಮಾಡಬೇಕೆಂದು ತಿಳಿಸಿದ್ದರೂ, ಅವರುಗಳನ್ನು ಮರು ನೇಮಕ ಮಾಡಿಕೊಂಡು ರಜಾ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ವೇತನ ಪಾವತಿಸಿರುವುದು ವರದಿಯಾಗಿದೆ. ಇದು ಸರಿಯಾದ ಕ್ರಮವಲ್ಲ ಎಂದು ತಿಳಿಸಿದರು. ಹಾಗೂ ಇವರಿಗೆ ನೀಡಿರುವ ವೇತನವನ್ನು ವಸೂಲಾತಿ ಮಾಡುವ ಕ್ರಮ ಹೇಗೆ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಹಣಕಾಸು ಅಧಿಕಾರಿಗಳಿಗೆ ಯಾವ ರೀತಿ ಇವರುಗಳಿಗೆ ವೇತನವನ್ನು ಬಿಡುಗಡೆಗೊಳಿಸಲಾಗಿದೆ ಎಂಬುದನ್ನು ಸಭೆಗೆ ತಿಳಿಸಲು ಸೂಚಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಆಯಾಯ ವಿಭಾಗದವರು ಹಾಜರಾತಿ ಮತ್ತು ಬಿಲ್‌ಅನ್ನು ಪರಿಶೀಲಿಸಿ ನಮಗೆ ಕಳುಹಿಸಿಕೊಡುತ್ತಾರೆ. ಅದರಂತೆ ಆ ಮಾಹಿತಿಗಳನ್ವಯ ವೇತನವನ್ನು ಬಿಡುಗಡೆಗೊಳಿಸಿರುತ್ತೇವೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಇಂತಹ ಲೋಪದೋಷಗಳು ಇನ್ನು ಎಲ್ಲೆಲ್ಲಿ ಆಗಿವೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡಬೇಕಾಗಿ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ರೀತಿಯ ಲೋಪದೋಷಗಳು ಎಲ್ಲೆಲ್ಲಿ ಆಗಿವೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದು ಕ್ರಮಕ್ಕೈಗೊಳ್ಳುವುದಾಗಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ 12 ಗಂಟೆಗಳ ಕಾರ್ಯಭಾರ ಆದೇಶ ನೀಡಿರುವ ಕೆಲವು ಅತಿಥಿ ಉಪನ್ಯಾಸಕರಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 04 ಮತ್ತು 08 ಗಂಟೆಗಳ ಕಾರ್ಯಭಾರ ಆದೇಶ ನೀಡಿರುತ್ತೀರಿ. ಪ್ರೊ. ತಿಮ್ಮರಾಯಪ್ಪ, ಅಧ್ಯಕ್ಷರು, ಬೋಧನಾ ಕಾರ್ಯಭಾರ ಹಂಚಿಕೆ ಸಮಿತಿಯ ವರದಿಯನ್ನು ಅನುಸರಿಸಲಾಗಿರುವ ಬಗ್ಗೆ ಸ್ಪಷ್ಟನೆ ನೀಡುವುದು. ಸ್ನಾತಕೋತ್ತರ ತರಗತಿಗಳು ಪ್ರಾರಂಭವಾಗಿದ್ದರೂ ಇನ್ನು ಅನೇಕ ಅತಿಥಿ ಉಪನ್ಯಾಸಕರುಗಳಿಗೆ ವಿಶ್ವವಿದ್ಯಾನಿಲಯವು ಆದೇಶ ನೀಡಿರುವುದಿಲ್ಲವೆಂದು ಪ್ರಸ್ತಾಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು ಮಾತನಾಡಿ, ಈ ರೀತಿ ದೂರುಗಳು ಗಮನಕ್ಕೆ ಬಂದಿದ್ದು, ವಿಶ್ವವಿದ್ಯಾನಿಲಯದಿಂದ ಆದೇಶ ನೀಡುವ ಸಂದರ್ಭದಲ್ಲಿ ಪರಿಶೀಲಿಸಿದ ನಂತರವೇ ಆದೇಶ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈಗಾಗಲೇ ಸ್ನಾತಕ (ಯುಜಿ) ಮತ್ತು ಸ್ನಾತಕೋತ್ತರ (ಪಿಜಿ) ಪ್ರತಿ ಕೋರ್ಸ್‌ಗಳ ಕಾರ್ಯಭಾರ ಪರಿಶೀಲನಾ ಸಮಿತಿಯನ್ನು ರಚಿಸಿದ್ದು, ವರದಿಯನ್ನು ಪರಿಶೀಲಿಸಲಾಗಿದೆ. ಈಗ ತಾವು ತಿಳಿಸಿರುವಂತೆ ವೇಳಾಪಟ್ಟಿಯನುಸಾರ ತರಗತಿಗಳು ನಡೆಯುತ್ತಿದೆಯೋ ಇಲ್ಲವೋ ಎಂದು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಲಾಗುವುದು ಮತ್ತು ಮಾನಸಗಂಗೋತ್ರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳು ವಿಶ್ವವಿದ್ಯಾನಿಲಯವು ಹಂಚಿಕೆ ಮಾಡಿರುವ 12.00 ಗಂಟೆ ಬೋಧನಾ ಕಾರ್ಯವನ್ನು ಪೂರ್ಣಗೊಳಿಸುತ್ತೇವೆ. ಆದರೆ ಸಂಜೆ 5.00 ಗಂಟೆತನಕ ಏಕೆ ವಿಭಾಗದಲ್ಲಿ ಉಪಸ್ಥಿತರಿರಬೇಕೆಂದು ಪ್ರಶ್ನಿಸುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 04, 08 ಹಾಗೂ 12 ಗಂಟೆಗಳಂತೆ ಮೂರು ವಿಧದಲ್ಲಿ ನೇಮಕ ಮಾಡಲಾಗುತ್ತಿದೆ. ಇದರಲ್ಲಿ 12 ಗಂಟೆಗಳನ್ನು ಪೂರ್ಣಾವಧಿಯೆಂದು ಪರಿಗಣಿಸುತ್ತೇವೆ. 04 ಮತ್ತು 08 ಗಂಟೆಗಳನ್ನು ಹಂಚಿಕೆ ಮಾಡುವ ಅತಿಥಿ ಉಪನ್ಯಾಸಕರುಗಳ ವೇತನವು ಕಡಿಮೆಯಿರುವುದರಿಂದ, ಬೇರೆ ಕಾಲೇಜಿನಲ್ಲಿ ಕಾರ್ಯನಿರ್ವಹಿಸಲು ಅವಕಾಶವಿದೆ. 04 ಮತ್ತು 08 ಗಂಟೆಗಳ ಬದಲು ಒಬ್ಬರಿಗೆ 12 ಗಂಟೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿ ನೇಮಕ ಮಾಡುವುದರಿಂದ, ಸುಮಾರು ಅತಿಥಿ ಉಪನ್ಯಾಸಕರುಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ. ಆ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಮೇಲೆ ಆರೋಪ ಮಾಡುವ ಜೊತೆಗೆ ಮತ್ತೆ ಅತಿಥಿ ಉಪನ್ಯಾಸಕರಾಗಿ ನೇಮಕ ಮಾಡಲೇಬೇಕೆಂದು ರಾಜಕಾರಣಿ/ಪ್ರಬಲರು/ಸಿಂಡಿಕೇಟ್ ಸದಸ್ಯರುಗಳಿಂದಲೂ ಒತ್ತಡ/ಶಿಫಾರಸ್ಸು

| | |
|---|---|
| | ಮಾಡುತ್ತಾರೆ. ಸದ್ಯದಲ್ಲೇ ಸರ್ಕಾರವು ಖಾಯಂ ಅಧ್ಯಾಪಕರುಗಳನ್ನು ನೇಮಕಾತಿ ಮಾಡಲು ಕ್ರಮವಹಿಸುತ್ತೇವೆಂದು ತಿಳಿಸಿದೆ. ಆಗ ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗುವುದು. ಸದ್ಯದ ಪರಿಸ್ಥಿತಿಯಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 04, 08 ಮತ್ತು 12 ಗಂಟೆಗಳಂತೆ ನೇಮಕ ಮಾಡಿರುವ ಅತಿಥಿ ಉಪನ್ಯಾಸಕರುಗಳನ್ನು ಮುಂದುವರೆಸೋಣ. ಕಾಲೇಜು ಶಿಕ್ಷಣದಿಂದ ಅತಿಥಿ ಉಪನ್ಯಾಸಕರುಗಳ ಪಟ್ಟಿಯನ್ನು ಪಡೆದು ಎರಡೂ ಕಾಲೇಜುನಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಈಗಾಗಲೇ ನೋಟಿಸ್ ಜಾರಿಗೊಳಿಸಲಾಗಿದೆ. ಉಪನ್ಯಾಸಕರುಗಳಿಗೆ ಪೂರ್ಣಾವಧಿ ಅಲ್ಲದಿದ್ದರೂ ಕನಿಷ್ಠ 5-6 ಗಂಟೆಗಳವರೆಗೆ ವಿಭಾಗದಲ್ಲಿ ಉಪಸ್ಥಿತರಿದ್ದು, ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ಕೋರುವ ವಿದ್ಯಾರ್ಥಿಗಳಿಗೆ ಸಹಮತ ವ್ಯಕ್ತಪಡಿಸಬೇಕೆಂದರು. ಅತಿಥಿ ಉಪನ್ಯಾಸಕರುಗಳಿಗೆ ಶೈಕ್ಷಣಿಕ ವರ್ಷದ 10 ತಿಂಗಳುಗಳು ಮಾತ್ರ ವಿಶ್ವವಿದ್ಯಾನಿಲಯವು ವೇತನ ಪಾವತಿಸಬೇಕೆ ಹೊರತು ರಜಾ ಅವಧಿಯಲ್ಲಿ ಯಾವುದೇ ಕಾರಣಕ್ಕೂ ವೇತನ ಪಾವತಿಸಬಾರದು. ಮಾನ್ಯ ಸದಸ್ಯರು ನೀಡುವ ಪಟ್ಟಿಯನ್ನು ಪರಿಶೀಲಿಸಿ, ಇಂತಹ ಪ್ರಕರಣಗಳು ಇದ್ದಲ್ಲಿ, ಅವರುಗಳ ವೇತನದಲ್ಲಿ ಕಟಾವು ಮಾಡಬೇಕೆಂದು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು. ಪ್ರೊ. ತಿಮ್ಮರಾಯಪ್ಪ ಅಧ್ಯಕ್ಷತೆಯ ವರದಿಯು ಹಿಂದಿನ ದಿನ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪ್ರಮಾಣವು ಕಡಿಯೆಯಾಗಿದ್ದು, ಇದರಿಂದ ಕೆಲವು ಕೋರ್ಸ್‌ಗಳಲ್ಲಿ ಬೋಧನಾ ಕಾರ್ಯಭಾರದ ಅವಧಿಯು ವ್ಯತ್ಯಾಸವಾಗಿರುತ್ತದೆ. ಆಗ ಒಂದೆರೆಡು ಪ್ರಕರಣಗಳು ಈ ರೀತಿ ಆಗಿದ್ದು, ಅವುಗಳನ್ನು ಸದ್ಯದಲ್ಲಿಯೇ ಪರಿಹರಿಸಲಾಗುವುದು. ಪ್ರತಿ ವರ್ಷವೂ ಬೋಧನಾ ಕಾರ್ಯಭಾರದ ವಿವರ ಪಡೆಯಲು ವಿಶ್ವವಿದ್ಯಾನಿಲಯವು ಎಲ್ಲಾ ವಿಭಾಗ/ಕಾಲೇಜುಗಳಿಗೆ ಈಗಾಗಲೇ ಸಿದ್ಧಪಡಿಸಲಾಗಿರುವ ನಮೂನೆಯಲ್ಲಿ ವಿವರ ಪಡೆಯಲಾಗುತ್ತಿದೆ.<br><br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರು ಮಾತನಾಡಿ, ನಂಜನಗೂಡು ಒಂದು ಕಾಲೇಜಿನ ಪ್ರಾಂಶುಪಾಲರು ಬೆಳಗ್ಗೆ 10.00 ರಿಂದ ಸಂಜೆ 5.30 ರವರೆಗೆ ಕಡ್ಡಾಯವಾಗಿ ಕಾಲೇಜಿನಲ್ಲಿರಬೇಕೆಂದು ನಿಯಮ ತಂದಿರುತ್ತದೆ. ಆದರೆ, ಅತಿಥಿ ಉಪನ್ಯಾಸಕರುಗಳು ನಮ್ಮನ್ನು ಅತಿಥಿ ಎಂದು ಪರಿಗಣಿಸುವಾಗ ಪೂರ್ಣಕಾಲಿಕವಾಗಿ ಕಾರ್ಯನಿರ್ವಹಿಸುವುದಿಲ್ಲವೆಂದು ತಿಳಿಸಿ, ಪ್ರತಿಭಟನೆ ಮಾಡಿರುತ್ತಾರೆ. ತಕ್ಷಣಕ್ಕೆ ಕಾಲೇಜಿಗೆ ಭೇಟಿ ನೀಡಿ ಸಂಜೆ 4.00 ಗಂಟೆಯವರೆಗೆ ಉಪಸ್ಥಿತರಿರಬೇಕೆಂದು ತಿಳಸಲಾಗಿದೆ.<br><br>ಶ್ರೀ ಸುರೇಶ್ ಮಾತನಾಡಿ, ಮಾನ್ಯತೆ ಪಡೆದಿರುವ ಹೆಚ್ಚಿನ ಪದವಿ ಕಾಲೇಜುಗಳು ಅತಿಥಿ ಉಪನ್ಯಾಸಕರುಗಳ ನೇಮಕಾತಿಯಿಂದಲೇ ಪ್ರತ್ಯೇಕವಾಗಿರುವುದು ಕಂಡು ಬಂದಿದೆ. ಅತಿಥಿ ಉಪನ್ಯಾಸಕರು ಹಾಗೂ ಅರೆಕಾಲಿಕ ಉಪನ್ಯಾಸಕರುಗಳಿಗೆ ವ್ಯತ್ಯಾಸವಿದೆ. ತಾಂತ್ರಿಕ ಶಿಕ್ಷಣವು ಅರೆಕಾಲಿಕ ಉಪನ್ಯಾಸಕರುಗಳಿಗೆ ಆದ್ಯತೆ ನೀಡಿ 09 ಗಂಟೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿ ಮಾಹೆಯಾನ ರೂ.15,000/-ಗಳನ್ನು ನಿಗದಿಪಡಿಸಿದೆ. ಇದ್ದರಿಂದ ಅರೆಕಾಲಿಕ ಉಪನ್ಯಾಸಕರುಗಳು ಬೇರೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಬಹುದು. ಕಾಲೇಜು ಶಿಕ್ಷಣವು ಅತಿಥಿ ಉಪನ್ಯಾಸಕರುಗಳಿಗೆ ಆದ್ಯತೆ ನೀಡಿ 12 ಗಂಟೆಗಳ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿ ಮಾಹೆಯಾನ ರೂ.40,000/-ಗಳನ್ನು ನಿಗದಿಪಡಿಸಿದೆ. ಕಾಲೇಜು ಶಿಕ್ಷಣದಲ್ಲಿ ಮಾನ್ಯತೆ ಪಡೆದಿರುವ ಕೋರ್ಸುಗಳಿಗಿಂತ ತಾಂತ್ರಿಕ ಶಿಕ್ಷಣದಲ್ಲಿ ಮಾನ್ಯತೆ ಪಡೆದಿರುವ ಕೋರ್ಸುಗಳು ಕಡಿಮೆಯಿದೆ. ಆದ್ದರಿಂದ ಅತಿಥಿ ಉಪನ್ಯಾಸಕರುಗಳು ಒಂದು ಕಡೆ ಮಾತ್ರ ಕಾರ್ಯನಿರ್ವಹಿಸಬೇಕೆಂದು ಷರತ್ತಿನೊಂದಿಗೆ ಆದೇಶ ನೀಡುವುದರಿಂದ, ಹಲವರಿಗೆ ಉಪನ್ಯಾಸಕರುಗಳಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಬಹುದು ಎಂದು ಸಲಹೆ ನೀಡಿದರು.<br><br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ Ph.D/NET/SLET ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಮಾಹೆಯಾನ ರೂ.32,000/-ಗಳನ್ನು ನಿಗದಿಪಡಿಸಿದೆ |

| | |
|---|---|
| | ಹಾಗೂ Ph.D/NET/SLET ಅರ್ಹತೆ ಹೊಂದಿಲ್ಲದೆ ಸ್ನಾತಕೋತ್ತರ ಪದವಿ ಮಾತ್ರ ಪಡೆದಿರುವ ಅಭ್ಯರ್ಥಿಗಳಿಗೆ ರೂ.30,000/-ಗಳನ್ನು ನಿಗದಿಪಡಿಸಲಾಗಿದೆಯೆಂದು ಸಭೆಯಲ್ಲಿ ಸ್ಪಷ್ಟತೆ ನೀಡಿದರು.<br><br>ಜಂಟಿ ನಿರ್ದೇಶಕರು ಮಾತನಾಡಿ, ಕಾಲೇಜು ಶಿಕ್ಷಣವು ಮೈಸೂರು ವಿಶ್ವವಿದ್ಯಾನಿಲಯದ ಅಧೀನ/ಸಂಯೋಜನೆಗೊಳಪಟ್ಟ ಎಲ್ಲಾ ಕಾಲೇಜುಗಳ ಅತಿಥಿ ಉಪನ್ಯಾಸಕರುಗಳ ಪಟ್ಟಿಯನ್ನು ಸಿದ್ಧಪಡಿಸಿದೆ. ಆದರೆ ರೂ.32,000/-ಗಳನ್ನು ನಿಗದಿಪಡಿಸಿರುವ ಅತಿಥಿ ಉಪನ್ಯಾಸಕರುಗಳಿಗೆ ಬೇರೆ ಸಂಸ್ಥೆ/ಕಾಲೇಜಿನಲ್ಲಿ ಕಾರ್ಯನಿರ್ವಹಿಸಬಾರದೆಂದು ಷರತ್ತು ವಿಧಿಸಿರುವುದಿಲ್ಲ. ಆ ಕಾರಣಗಳಿಂದಾಗಿ ಗೊಂದಲಗಳು ಉದ್ಭವಿಸುತ್ತಿದೆ ಮತ್ತು ಇದರಿಂದ ಮೊನ್ನೆ ನಡೆದ ನಂಜನಗೂಡು ಕಾಲೇಜಿನ ಪ್ರತಿಭಟನೆಯೂ ಸಹ ಕಾರಣವಾಗಿದೆ. ತರಗತಿಗಳು ನಡೆದ ನಂತರವೂ ಪಠ್ಯಕ್ರಮದ ಬಗ್ಗೆ ಕೆಲವು ವಿದ್ಯಾರ್ಥಿಗಳು ಮಾರ್ಗದರ್ಶನ ಕೋರುವ ಹಿನ್ನೆಲೆಯಲ್ಲಿ 12 ಗಂಟೆಗಳ ಆದೇಶ ನೀಡಿರುವ ಅತಿಥಿ ಉಪನ್ಯಾಸಕರುಗಳು ಪೂರ್ಣಾವಧಿ ಇರುವುದು ಸೂಕ್ತವೆಂದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ 853 ಅತಿಥಿ ಉಪನ್ಯಾಸಕರುಗಳು ಕಾರ್ಯನಿರ್ವಹಿಸುತ್ತಿದ್ದು, ಆಯಾ ಕಾಲೇಜು/ಸಂಸ್ಥೆ/ಕೇಂದ್ರ/ ಅಧ್ಯಯನ ವಿಭಾಗದವರು ಅತಿಥಿ ಉಪನ್ಯಾಸಕರುಗಳ ವೇತನ ಹುಂಡಿಯನ್ನು ಹಣಕಾಸು ಅಧಿಕಾರಿಗಳಿಗೆ ಸಲ್ಲಿಸುವ ಮೊದಲು ಸರಿಯಾಗಿ ಪರಿಶೀಲಿಸುವುದರಿಂದ, ರಜಾ ಅವಧಿಯಲ್ಲಿ ವೇತನ ಪಾವತಿ ಮಾಡುವ ಉದಾಹರಣೆಗಳು ಕಂಡು ಬರುವುದಿಲ್ಲವೆಂದರು.<br><br>ಕುಲಸಚಿವರು ಮಾತನಾಡಿ, ಕಾರ್ಯಭಾರ ಸಮಿತಿ ಶಿಫಾರಸ್ಸಿನಂತೆ ವಾಣಿಜ್ಯಶಾಸ್ತ್ರ ವಿಷಯದ (ಸ್ನಾತಕ) ಕೆಲವು ಅತಿಥಿ ಉಪನ್ಯಾಸಕರುಗಳಿಗೆ ಮಾತ್ರ 12 ಗಂಟೆಗಳ ಬೋಧನಾ ಕಾರ್ಯಭಾರದ ಆದೇಶ ನೀಡುವ ಬದಲು 04 ಮತ್ತು 08 ಗಂಟೆಗಳ ಆದೇಶ ಹೊರಡಿಸಲಾಗಿದೆ. ಇವರುಗಳಿಗೆ ಸದ್ಯದಲ್ಲೇ 12 ಗಂಟೆಗಳಂತೆ ಹಂಚಿಕೆ ಮಾಡಿ ಮರುಆದೇಶ ನೀಡಲಾಗುವುದು. ಹಾಗೆಯೇ, ಆಯಾ ಕಾಲೇಜು/ಸಂಸ್ಥೆ/ಕೇಂದ್ರ/ಅಧ್ಯಯನ ವಿಭಾಗದವರು ಅತಿಥಿ ಉಪನ್ಯಾಸಕರುಗಳ ವೇತನ ಹುಂಡಿಯನ್ನು ಹಣಕಾಸು ಅಧಿಕಾರಿಗಳಿಗೆ ಸಲ್ಲಿಸುವ ಮೊದಲು ಸರಿಯಾಗಿ ಪರಿಶೀಲಿಸಬೇಕು. ಎಲ್ಲಾ ವಿಭಾಗಕ್ಕೂ ಬೋಧನಾ ಕಾರ್ಯಭಾರದ ವಿವರವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂದು ಒಂದುವರೆ ತಿಂಗಳ ಹಿಂದೆಯೇ ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಇದರಲ್ಲಿ ಯಾವ ವಿಭಾಗದವರು ಬೋಧನಾ ಕಾರ್ಯಭಾರದ ವಿವರ ನೀಡಿರುವುದಿಲ್ಲವೋ, ಅಂತಹ ವಿಭಾಗದ ಅತಿಥಿ ಉಪನ್ಯಾಸಕರುಗಳಿಗೆ ಮಾತ್ರ ಆದೇಶ ನೀಡಿರುವುದಿಲ್ಲ. ಆ ವಿಭಾಗದವರು ಕಾರ್ಯಭಾರದ ವಿವರವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದರೆ, ತರಗತಿಗಳು ಪ್ರಾರಂಭ/ತೆಗೆದುಕೊಂಡ ದಿನಾಂಕದಿಂದಲೇ ಆದೇಶ ನೀಡಲಾಗುವುದು ಎಂದರು.<br><br>ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಕಾರ್ಯಭಾರ ಪರಿಶೀಲನಾ ಸಮಿತಿಯವರು ಯಾವ ಯಾವ ವಿಭಾಗದಲ್ಲಿ ಮಾಹಿತಿಯನ್ನು ಪಡೆದಿದ್ದರೋ, ಅದರಲ್ಲಿ ಕೆಲವೊಂದು ವಿಭಾಗದಲ್ಲಿ ಕಾರ್ಯಭಾರದ ವರದಿಯನ್ನು ಮಾತ್ರ ಪಡೆದಿರುತ್ತಾರೆ. ಇದರೊಂದಿಗೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳ ಪ್ರಥಮವಾಗಿ ಕೆಲಸಕ್ಕೆ ವರದಿ ಮಾಡಿಕೊಂಡಿರುವ ದಿನಾಂಕವನ್ನು ಪಡೆಯುವುದು ಸೂಕ್ತ. ಕಾರ್ಯಭಾರ ಪರಿಶೀಲನಾ ಸಮಿತಿಯವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಒಂದೆರೆಡು ವ್ಯತ್ಯಾಸವಾಗುವುದು ಸಹಜ. ಆದರೆ ವಿಭಾಗದ ಅಧ್ಯಕ್ಷರೇ ಕಿರಿಯ ಅತಿಥಿ ಉಪನ್ಯಾಸಕರುಗಳಿಗೆ ಹೆಚ್ಚು ಗಂಟೆಯ ಕಾರ್ಯಭಾರವನ್ನು ನೀಡಿ, ಹಿರಿಯ ಅತಿಥಿ ಉಪನ್ಯಾಸಕರುಗಳಿಗೆ ಕಡಿಮೆ ಗಂಟೆಯ ಕಾರ್ಯಭಾರವನ್ನು ನೀಡುವ ಮೂಲಕ ಪಕ್ಷಪಾತವೆಸಗಿದ್ದಾರೆ. ಇಂತಹ ಪ್ರಕರಣಗಳು ಕಾರ್ಯಭಾರ ಪರಿಶೀಲನಾ ಸಮಿತಿಯವರಿಗೂ ತಿಳಿದುಬಂದಿರುವುದಿಲ್ಲ. ಆದ್ದರಿಂದ ವಿಶ್ವವಿದ್ಯಾನಿಲಯವು ಕೆಲಸಕ್ಕೆ ಸೇರಿದ ದಿನಾಂಕದಿಂದ ಎಲ್ಲಾ ಮಾಹಿತಿಯನ್ನೊಳಗೊಂಡ ಒಂದು ನಮೂನೆಯನ್ನು |

| | |
|---|---|
| | ಸಿದ್ಧಪಡಿಸಿ, ಎಲ್ಲಾ ವಿಭಾಗದವರಿಂದ ಆ ನಮೂನೆಯಲ್ಲಿ ಮಾಹಿತಿ ಪಡೆಯುವುದರಿಂದ, ಕೆಲವು ಅತಿಥಿ ಉಪನ್ಯಾಸಕರುಗಳಿಗೆ 12 ಗಂಟೆಗಳ ಬೋಧನಾ ಕಾರ್ಯಭಾರದ ಆದೇಶ ನೀಡುವ ಬದಲು 04 ಮತ್ತು 08 ಗಂಟೆಗಳ ಆದೇಶ ಹೊರಡಿಸುವ ಪ್ರಮೇಯವಿರುವುದಿಲ್ಲ. ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜಿನಲ್ಲಿ "ಕೆಲಸಕ್ಕೆ ಸೇರಿದ ದಿನಾಂಕ" ಮಾಹಿತಿಯನ್ನು ಪಡೆದಿರುವುದಿಲ್ಲ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಮೇಲ್ಕಂಡ ಸಮಸ್ಯೆಗಳನ್ನು ಬಗೆಹರಿಸುವ ಸಂಬಂಧ ಕೂಡಲೇ ಒಂದು ವಿಶೇಷ ಸಮಿತಿಯನ್ನು ರಚಿಸಲಾಗುವುದು ಎಂದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು/ಸಂಸ್ಥೆ/ಕೇಂದ್ರ/ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ ವಿಸ್ತೃತ ವರದಿ ಪಡೆಯಲು ಒಂದು ವಿಶೇಷ ಸಮಿತಿ ರಚಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/5.36 | ಶ್ರೀ ಗಗನ್ ಕೆ.ಜೆ., ದ್ವಿತೀಯ ಎಂ.ಪಿ.ಎಡ್. ವಿದ್ಯಾರ್ಥಿ, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ನೀಡಿರುವ ದೂರಿನ ಸಂಬಂಧ ವಿಶ್ವವಿದ್ಯಾನಿಲಯದಿಂದ ರಚಿಸಿರುವ ಪರಿಶೀಲನಾ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ. |
| | ಕುಲಸಚಿವರು ಮಾತನಾಡಿ, ಗಗನ್.ಕೆ.ಜೆ, ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗದಲ್ಲಿ ಅಂತಿಮ ವರ್ಷದ ಎಂ.ಪಿ.ಎಡ್ ವ್ಯಾಸಂಗ ಮಾಡುತ್ತಿರುವ ಶ್ರೀ ಗಗನ್.ಕೆ.ಜೆ ಎಂಬ ವಿದ್ಯಾರ್ಥಿಯು ಡಾ.ಸಿ.ವೆಂಕಟೇಶ್, ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಶೈಕ್ಷಣಿಕವಾಗಿ ಹಾಗೂ ಮಾನಸಿಕವಾಗಿ ವೈಯಕ್ತಿಕವಾಗಿ ದೌರ್ಜನ್ಯ ಹಾಗೂ ದೈಹಿಕ ಹಲ್ಲೆ ಮಾಡಿದ್ದಾರೆಂದು ದಿನಾಂಕ: 09-09-2023ರಂದು ಬೆಳಗ್ಗೆ ಸುಮಾರು 10 ಗಂಟೆಯಿಂದ 10.30 ರ ಅವಧಿಯಲ್ಲಿ ಕ್ರಾಫರ್ಡ್ ಭವನದ ಮುಂದೆ ಕೆಲವು ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಅವನನ್ನು ಅವನ ಸಹಪಾಠಿ ವಿದ್ಯಾರ್ಥಿಗಳು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಈ ಸಂಬಂಧ ವಾಸ್ತವಾಂಶಗಳನ್ನೊಳಗೊಂಡಂತೆ ಪ್ರಾಥಮಿಕ ವರದಿಯನ್ನು ಪಡೆಯಲಾಯಿತು. ಹಾಗೂ ವಿದ್ಯಾರ್ಥಿಯ ಪೋಷಕರು ಲಕ್ಷ್ಮಿಪುರಂ ಪೋಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಿರುತ್ತಾರೆ. ರಾಜ್ಯ ಕಾರ್ಯದರ್ಶಿಗಳು, ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ (ರಿ) ಮತ್ತು ರಾಜ್ಯ ಸಹ ಕಾರ್ಯದರ್ಶಿ, ಕದಂಬ ಸೈನ್ಯ ಕನ್ನಡ ಸಂಘಟನೆ (ನೋಂ) ಅವರುಗಳು ಡಾ. ಸಿ.ವೆಂಕಟೇಶ್ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ, ವಿದ್ಯಾರ್ಥಿಗೆ ನ್ಯಾಯ ಒದಗಿಸಬೇಕೆಂದು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಿರುತ್ತಾರೆ.<br><br>ಸದರಿ ಪ್ರಕರಣದ ಸಂಬಂಧ ಆಂತರಿಕ ಪರಿಶೀಲನಾ ಸಮಿತಿಯನ್ನು ರಚಿಸಲಾಯಿತು. ದಿನಾಂಕ: 13-09-2023ರಂದು ಆಂತರಿಕ ಪರಿಶೀಲನಾ ಸಮಿತಿಯವರು ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು ಕುಲಸಚಿವರಿಗೆ ಸಲ್ಲಿಸಿರುತ್ತಾರೆ. ಈ ವರದಿಯನ್ನು ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ಸಿಸಿಎ ಅಧಿನಿಯಮದೊಂದಿಗೆ ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆಯೆಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿ ಮತ್ತು ಕುಲಸಚಿವರು ಆಂತರಿಕ ಪರಿಶೀಲನಾ ಸಮಿತಿಯವರು ಮುಚ್ಚಿದ ಲಕೋಟೆಯಲ್ಲಿದ್ದ ವರದಿಯನ್ನು ಇದುವರೆವಿಗೂ ತೆರೆಯದಿರುವುದರಿಂದ ಕುಲಪತಿ ಆದೇಶಾನುಸಾರ ಕುಲಸಚಿವರು ಸಿಂಡಿಕೇಟ್ ಸಭೆಯಲ್ಲಿ ಲಕೋಟೆಯನ್ನು ತೆರೆದು, ಆಂತರಿಕ ಪರಿಶೀಲನಾ ಸಮಿತಿಯವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಪೂರ್ಣ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸಮಿತಿಯು 04 ವಿದ್ಯಾರ್ಥಿಗಳ ವಿಚಾರಣೆ ಮಾತ್ರ ಮಾಡಲಾಗಿದೆ. ಒಂದು ಕಡೆ ಡಾ. ಸಿ.ವೆಂಕಟೇಶ್ ವರದಿಯನುಸಾರ |

| | |
|---|---|
| | ಸಮಿತಿಯ ಮುಂದೆ ಇವರ ವಿರುದ್ಧವಾಗಿ ಹೇಳಿಕೆ ನೀಡಿರುವವರು ಪೋಷಕರು ಹಾಗೂ 04 ವಿದ್ಯಾರ್ಥಿಗಳು ಕುಲಸಚಿವರ ಸಮ್ಮುಖದಲ್ಲಿ ದೂರಿರುವ ಹಿನ್ನೆಲೆಯಲ್ಲಿ, ಕುಲಸಚಿವರು ಆಂತರಿಕ ಪರಿಶೀಲನಾ ಸಮಿತಿಯನ್ನು ರಚಿಸಿದರು.<br><br>ಡಾ. ಸಿ.ವೆಂಕಟೇಶ್ ಅವರು ಶ್ರೀ ಗಗನ್.ಕೆ.ಜೆ ವಿದ್ಯಾರ್ಥಿಗೆ ಕ್ರೀಡಾ ಮೈದಾನದಲ್ಲಿಯೇ ಎಲ್ಲರ ಮುಂದೆ ಹಲ್ಲೆ ಮಾಡುತ್ತಿದ್ದರು ಎಂದು ಸಮಿತಿಯ ಮುಂದೆ ವಿದ್ಯಾರ್ಥಿಯು ಹೇಳಿಕೆ ನೀಡಿದ್ದು, ಆ ಸಂದರ್ಭದಲ್ಲಿ ಹಲ್ಲೆಯನ್ನು ಸುಮಾರು ವಿದ್ಯಾರ್ಥಿಗಳು ವೀಕ್ಷಿಸಿರುತ್ತಾರೆ. ಈ ರೀತಿ ಒಬ್ಬ ಪ್ರಾಧ್ಯಾಪಕರು ವಿದ್ಯಾರ್ಥಿಗೆ ತೊಂದರೆ ಕೊಡುತ್ತಿದ್ದಾರೆ ಎಂದರೆ ಅವರು ಮಾನಸಿಕವಾಗಿ ಅಸ್ವಸ್ಥರಾಗಿ ಹಾಗೂ ವಿಕೃತ ಮನಸ್ಸುಳ್ಳವರಾಗಿರುತ್ತಾರೆ. ಈ ಪ್ರವೃತ್ತಿಯುಳ್ಳವರಾಗಿದ್ದರೆ ಅವರು ಒಬ್ಬ ವಿದ್ಯಾರ್ಥಿಗೆ ಮಾತ್ರ ಈ ರೀತಿಯ ತೊಂದರೆಯನ್ನು ನೀಡಿರುವುದಿಲ್ಲ. ಇದರಂತೆ ಇತರೆ ವಿದ್ಯಾರ್ಥಿಗಳು ಸಹ ತೊಂದರೆಯನ್ನು ಅನುಭವಿಸಿರುವ ಸಂಭವವಿರುತ್ತದೆ. ಆ ದಿಕ್ಕಿನಲ್ಲೂ ಸಹ ವಿಚಾರಣೆ ಮಾಡಬೇಕಾಗಿರುತ್ತದೆ.<br><br>ಅದೇ ರೀತಿ ದಿನನಿತ್ಯ ನಿರಂತರವಾಗಿ ದೈಹಿಕವಾಗಿ, ಮಾನಸಿಕವಾಗಿ, ಶೈಕ್ಷಣಿಕವಾಗಿ ನನಗೆ ತುಂಬಾ ತೊಂದರೆ ನೀಡಿರುತ್ತಾರೆಂದು ವಿದ್ಯಾರ್ಥಿಯು ದೂರಿದ್ದಾರೆ. ಈ ರೀತಿ ನಡೆದಿದ್ದರೆ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದಲ್ಲಿರುವ ಎಲ್ಲಾ ಪ್ರಾಧ್ಯಾಪಕರುಗಳ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ಬಂದಿರುತ್ತದೆ. ಸಮಿತಿಯು ಸಮಗ್ರವಾಗಿ ಎಲ್ಲಾ ಪ್ರಾಧ್ಯಾಪಕರುಗಳು ಮತ್ತು ವಿದ್ಯಾರ್ಥಿಗಳಿಂದ ಹೇಳಿಕೆ ಪಡೆಯಬೇಕಿತ್ತು. ಕೇವಲ ಶ್ರೀ ಗಗನ್.ಕೆ.ಜೆ ವಿದ್ಯಾರ್ಥಿಯ ಪೋಷಕರು ಮತ್ತು ಆತನ ಸ್ನೇಹಿತರಾದ 04 ವಿದ್ಯಾರ್ಥಿಗಳಿಂದ ಮಾತ್ರ ಹೇಳಿಕೆ ಪಡೆದಿರುವುದು ವಿಚಾರಣಾ ಲೋಪದೋಷಕ್ಕೆ ಕಾರಣವಾಗಿದೆ. "ಒಬ್ಬ ಅಪರಾಧಿಗೆ ಶಿಕ್ಷೆ ಆಗದಿದ್ದರೂ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು" ಎಂಬ ನಾಣ್ನುಡಿ ಕಾನೂನು ಕ್ಷೇತ್ರದಲ್ಲಿದೆ. ಸಮಗ್ರವಾಗಿ ವಿಚಾರಣೆ ನಡೆಸಿದಾಗ ಬಹುತೇಕರ ಅಭಿಪ್ರಾಯವು ಒಂದೇಯಾಗಿದ್ದಾಗ ಅರ್ಥವಿರುತ್ತದೆ. ವಿದ್ಯಾರ್ಥಿಯು ಆತ್ಮಹತ್ಯೆಗೆ ಪ್ರಯತ್ನಿಸಿದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಮುಖ್ಯಸ್ಥರಾಗಿರುವ ಸನ್ಮಾನ್ಯ ಕುಲಪತಿ ಇರುವುದಿಲ್ಲ ಎಂದು ವರದಿಯಲ್ಲಿದೆ. ಆದರೆ ಆತ್ಮಹತ್ಯೆಗೆ ಪ್ರಯತ್ನ ಪಡುವ ಯಾವುದೇ ವ್ಯಕ್ತಿ ಏಕಾಏಕಿ ಪ್ರಯತ್ನಿಸುವುದಿಲ್ಲ. ಯಾವುದೇ ವಿದ್ಯಾರ್ಥಿಗೆ ತೊಂದರೆಯಾದ ಸಂದರ್ಭದಲ್ಲಿ ತನಗಾದ ನೋವನ್ನು ಅಳಲನ್ನು ತಮ್ಮ ವಿಭಾಗದ ಮುಖ್ಯಸ್ಥರಿಗೆ ಅಥವಾ ಕುಲಸಚಿವರಿಗೆ/ಕುಲಪತಿಗಳಿಗೆ ಮನವಿಯನ್ನು ಸಲ್ಲಿಸಿ ದೂರು ನೀಡಿರುತ್ತಾರೆ. ಇಂತಹ ಸಂದರ್ಭದಲ್ಲಿ ಆ ವಿದ್ಯಾರ್ಥಿಗೆ ಯಾರಿಂದಲೂ ಸಕಾರಾತ್ಮಕವಾದ ನ್ಯಾಯ ಸಿಗದಿದ್ದಾಗ ಮಾತ್ರ ಅಂತಹ ವ್ಯಕ್ತಿ ಆತ್ಮಹತ್ಯೆಗೆ ಪ್ರಯತ್ನಿಸುವ ಸಂಭವವಿರುತ್ತದೆ. ಆದ್ದರಿಂದ ಶ್ರೀ ಗಗನ್ ಕೆ.ಜೆ. ವಿದ್ಯಾರ್ಥಿಯು ಎಷ್ಟು ಬಾರಿ ತಮ್ಮ ಮನವಿಯನ್ನು ಯಾರು ಯಾರಿಗೆ ಸಲ್ಲಿಸಿದ್ದಾರೆ ಎಂಬ ಮಾಹಿತಿಯನ್ನು ಹಾಗೂ ಇದರ ಬಗ್ಗೆ ಅಧಿಕಾರಿಗಳು ಯಾವ ಕ್ರಮವನ್ನು ಕೈಗೊಂಡಿರುತ್ತಾರೆ ಎಂಬುದರ ಬಗ್ಗೆ ಮಾಹಿತಿಯನ್ನು ಈ ವರದಿಯಲ್ಲಿ ಸಲ್ಲಿಸಿರುವುದಿಲ್ಲ. ಒಂದು ವೇಳೆ ಮನವಿಗಳನ್ನು ಸಲ್ಲಿಸಿದ್ದಲ್ಲಿ ಆ ಪತ್ರಗಳು ಎಲ್ಲಿವೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡುವುದು.<br><br>ಆ ಸಂದರ್ಭದಲ್ಲಿ ಕುಲಸಚಿವರ ಕೆಲವು ಸೂಚನೆ ಮೇರೆಗೆ ಕಾನೂನ್ನಾತ್ಮಕ ತನಿಖೆಯಾಗಿರುತ್ತದೆ. ಈ ತನಿಖೆಯು ಭಾಗಶಃ ವರದಿಯಾಗಿದ್ದು, ಪೂರ್ಣ ಪ್ರಮಾಣದಲ್ಲಾಗಿರುವುದಿಲ್ಲವೆಂದು ಮೇಲ್ನೋಟಕ್ಕೆ ಕಂಡು ಬಂದಿದೆ. ಸದರಿ ವರದಿಯನ್ನೇ ತೀರ್ಮಾನವೆಂದು ಪರಿಗಣಿಸುವ ಬದಲು ಇನ್ನೊಂದು ಸಮಿತಿಯನ್ನು ರಚಿಸಿ ಎಲ್ಲಾ ಪ್ರಾಧ್ಯಾಪಕರುಗಳ ಮತ್ತು ವಿದ್ಯಾರ್ಥಿಗಳ ಹೇಳಿಕೆಯನ್ನು ಪಡೆದು ವರದಿ ಸಲ್ಲಿಸುವುದು ಸೂಕ್ತವೆಂದರು.<br><br>ಶ್ರೀ ಗೋಕುಲ ಗೋವರ್ಧನ್ ಮಾತನಾಡಿ, ಹಲ್ಲೆಗೊಳಗಾಗಿದ್ದ ಶ್ರೀ ಗಗನ್.ಕೆ.ಜೆ ವಿದ್ಯಾರ್ಥಿಯು ಆಸ್ಪತ್ರೆಗೆ ದಾಖಲಾಗಿದ್ದರೆಂದು ಭಾವನಾತ್ಮಕವಾಗಿ ನೋಡುವ ವಿಚಾರ ಒಂದು ಭಾಗವಾದರೆ, ವಿದ್ಯಾರ್ಥಿಯ ಹಿನ್ನೆಲೆ, ಮನಸ್ಥಿತಿ ಮತ್ತು ಈ ಘಟನೆ ನಡೆಯಲು |

| | |
|---|---|
| | ಯಾರದೋ ಒತ್ತಡ/ಉದ್ದೇಶಕ್ಕಾಗಿ ನಡೆದಿದ್ದೆಯೇ ಎಂದು ಆಳವಾಗಿ ಪರಿಶೀಲಿಸಬೇಕು. ವಿದ್ಯಾರ್ಥಿಯು ತಿಳಿಸಿದ್ದ 04 ಸಹಪಾಠಿಯರ ಹೇಳಿಕೆಯನ್ನು ಮಾತ್ರ ಪಡೆದಿರುವುದು ಸರಿಯಲ್ಲ. ಈ ಘಟನೆಯ ಬಗ್ಗೆ ಹೇಳಿಕೆ ನೀಡಿರುವ 04 ವಿದ್ಯಾರ್ಥಿಗಳೊಂದಿಗೆ ವಿಭಾಗದಲ್ಲಿರುವ ಪ್ರಾಧ್ಯಾಪರುಗಳು, ಸಿಬ್ಬಂದಿವರ್ಗ ಮತ್ತು ಇತರೆ ವಿದ್ಯಾರ್ಥಿಗಳಿಂದಲೂ ಸಮಗ್ರವಾಗಿ ಹೇಳಿಕೆಯನ್ನು ಪಡೆದು ಸಮಿತಿಯು ವರದಿ ಸಲ್ಲಿಸಿದಾಗ ಮಾತ್ರ ಈ ವರದಿಯನ್ನು ಸಿಂಡಿಕೇಟ್ ಸಭೆಯ ತೀರ್ಮಾನವೆಂದು ಪರಿಗಣಿಸಬಹುದಾಗಿತ್ತು. ಆದ್ದರಿಂದ ಈ ಪ್ರಕರಣವನ್ನು ಮರು ತನಿಖೆ ಮಾಡಬೇಕೆಂದು ತಿಳಿಸಿದರು.<br><br>ಜಂಟಿ ನಿರ್ದೇಶಕರು ಮಾತನಾಡಿ, ಆಂತರಿಕ ಪರಿಶೀಲನಾ ಸಮಿತಿಯವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ವರದಿಯನ್ನು ಪರಾಮರ್ಶಿಸಿದಾಗ, ವರದಿಯಂತೆ ಕ್ರಮ ತೆಗೆದುಕೊಳ್ಳುವ ಬದಲು ಇನ್ನೊಂದು ಸಮಿತಿ ರಚಿಸಿ ವಿಚಾರಣೆ ಮಾಡಬೇಕೆಂದು ತಿಳಿಸಿದರು.<br><br>ಕುಲಪತಿಗಳು ಮಾತನಾಡಿ, ಶ್ರೀ ಗಗನ್.ಕೆ.ಜೆ ವಿದ್ಯಾರ್ಥಿಯು ಆತ್ಮಹತ್ಯೆಗೆ ಪ್ರಯತ್ನಿಸಿದ ದಿನವು ಸಾರ್ವತ್ರಿಕ ರಜಾ ದಿನವಾಗಿರುತ್ತದೆ. ಸೆಕ್ಯೂರಿಟಿ ಗಾರ್ಡ್‌ಗಳನ್ನು ಹೊರತುಪಡಿಸಿದರೆ, ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗೂ ಉದ್ಯೋಗಿಗಳು ಯಾರು ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಕ್ರಾಫರ್ಡ್ ಭವನದಲ್ಲಿಯೇ ಸ್ವತಃ ವಿಡಿಯೋ ಮಾಡಿ ಆತ್ಮಹತ್ಯೆಗೆ ಪ್ರಯತ್ನಿಸಿರುವುದು ಕಂಡು ಬಂದಿದೆ. ಇವುಗಳನ್ನೆಲ್ಲ ಒಳಗೊಂಡಂತೆ ಸಮಗ್ರವಾಗಿ ವಿಚಾರಣೆ ನಡೆಸಲು ಒಂದು ಪರಿಷ್ಕೃತ ಸಮಿತಿ ರಚಿಸಲಾಗುವುದೆಂದು ತಿಳಿಸಿದರು. |
| ತೀರ್ಮಾನ | ಶ್ರೀ ಗಗನ್ ಕೆ.ಜೆ., ದ್ವಿತೀಯ ಎಂ.ಪಿ.ಎಡ್. ವಿದ್ಯಾರ್ಥಿ, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ನೀಡಿರುವ ದೂರು ಹಾಗೂ ಆತ್ಮಹತ್ಯೆಗೆ ಪ್ರಯತ್ನಿಸಿರುವಪ್ರಕರಣದ ಸಂಬಂಧ ಸಮಗ್ರವಾಗಿ ವಿಚಾರಣೆ ನಡೆಸಲು ಈ ಕೆಳಕಂಡವರನ್ನೊಳಗೊಂಡಂತೆ ಪರಿಷ್ಕೃತ ಸಮಿತಿ ರಚಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.<br>* ಪ್ರೊ. ಸೋನೆರ್ ನಂದಪ್ಪ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ – ಅಧ್ಯಕ್ಷರು<br>* ಪ್ರೊ. ಎಂ.ಜಿ.ಮಂಜುನಾಥ, ಡೀನರು, ಕಲಾ ನಿಕಾಯ – ಸದಸ್ಯರು<br>* ಪ್ರೊ. ಎನ್.ನಾಗರಾಜ, ನಿರ್ದೇಶಕರು, ಪಿ.ಎಂ.ಇ.ಬಿ. – ಸದಸ್ಯರು<br>* ಡಾ. ಟಿ.ಆರ್.ಚಂದ್ರಶೇಖರ್, ಸಿಂಡಿಕೇಟ್ ಸದಸ್ಯರು – ಸದಸ್ಯರು<br>* ಶ್ರೀ ಗೋಕುಲ್ ಗೋವರ್ಧನ್, ಸಿಂಡಿಕೇಟ್ ಸದಸ್ಯರು – ಸದಸ್ಯರು<br>* ಶ್ರೀ ಚಂದ್ರಯ್ಯ.ಟಿ, ವಿಶೇಷಾಧಿಕಾರಿಗಳು, ಪಿಹೆಚ್.ಡಿ (ಮೌಲ್ಯಮಾಪನ) – ಸದಸ್ಯರು<br>* ಡಾ. ಬಿ.ಎಸ್.ಚಂದ್ರಶೇಖರ್, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ – ಸದಸ್ಯರು |
| ಇತರೆ ವಿಷಯಗಳು | ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಈ ಅಂಶಗಳನ್ನೆಲ್ಲಾ ಪರಿಶೀಲಿಸಿದ್ದರೆ ಕಾರ್ಯಪಾಲಕ ಅಭಿಯಂತರರನ್ನು ಕೂಡಲೇ ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆ ಮಾಡಿ, ವಿಶ್ವವಿದ್ಯಾನಿಲಯದ ಆಡಳಿತವನ್ನು ಚುರುಕುಗೊಳಿಸುವ ಇಂಜಿನಿಯರ್ ನಿಯೋಜಿಸಿಕೊಳ್ಳುವುದು ಸೂಕ್ತವೆಂದರು ಹಾಗೆಯೇ ಶ್ರೀ ಗೋಕುಲ್ ಗೋವರ್ಧನ್ ಅವರ ಈ ವಿಷಯದ ಬಗ್ಗೆ ದನಿಗೂಡಿಸಿದರು.<br><br>ಇದೇ ಸಂದರ್ಭದಲ್ಲಿ ಮಾನ್ಯ ಕುಲಪತಿಗಳು ಬೇಸರದಿಂದ ಮಾತನಾಡಿ ನಾನು ಒಂದು ತಿಂಗಳ ಹಿಂದೆಯೇ ಶ್ರೀ ಪ್ರತಾಪ್, ಕಾರ್ಯಪಾಲಕ ಅಭಿಯಂತರರನ್ನು ಬಿಡುಗಡೆಗೊಳಿಸಲು ಕುಲಸಚಿವರಿಗೆ ತಿಳಿಸಿದ್ದಾಗ್ಯೂ ಕಾರ್ಯರೂಪಕ್ಕೆ ಬಂದಿಲ್ಲವೆಂದು ತಿಳಿಸಿದರು. |

| | |
|---|---|
| | ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸಕಾಲ' ಕಾಯ್ದೆ ಜಾರಿಯಲ್ಲಿಲ್ಲವೆ ಎಂದು ಪ್ರಶ್ನಿಸಿದರು.<br><br>ಕುಲಸಚಿವರು ಸಕಾಲ ಕಾಯ್ದೆಯು ನಮ್ಮಲ್ಲಿ ಚಾಲ್ತಿಯಲ್ಲಿದೆ ಎಂದು ತಿಳಿಸಿದರು.<br><br>ನಂತರ ಡಾ.ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಆಗಿದ್ದಲ್ಲಿ ಒಂದೊಂದು ತಿಂಗಳು ಕಡತಗಳು ವಿಳಂಬವಾಗಿರುವುದೇಕೆ ಹಾಗೂ ಕುಲಪತಿಗಳು ತಿಳಿಸಿರುವಂತೆ ಶ್ರೀ ಪ್ರತಾಪ್ ಅವರನ್ನು ಏಕೆ ಬಿಡುಗಡೆಗೊಳಿಸಲು ಕ್ರಮಕೈಗೊಂಡಿರುವುದಿಲ್ಲ ಎಂದು ಮರು ಪ್ರಶ್ನಿಸಿದರು. ಆದ್ದರಿಂದ ತಕ್ಷಣವೆ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಲ್ಲೂ ಹಾಗೂ ಇಲಾಖೆಗಳಲ್ಲೂ ಸಕಾಲ ಕಾಯ್ದೆಯ ಫಲಕಗಳನ್ನು ಅಳವಡಿಸಿ, ಅದರಂತೆಯೇ ಕಾರ್ಯವೈಖರಿಯನ್ನು ನಿರ್ವಹಿಸಲು ಕ್ರಮಕೈಗೊಳ್ಳಲು ಹಾಗೂ ವಿಳಂಬವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲು ಮಾನ್ಯ ಅಧ್ಯಕ್ಷರಿಗೆ ತಮ್ಮ ಮನವಿಯನ್ನು ಸಲ್ಲಿಸಿದರು.<br><br>ಅಂತಿಮವಾಗಿ, ಶ್ರೀ ಆರ್. ಪ್ರತಾಪ್, ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾನಿಲಯ ತಾಂತ್ರಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಸ್ವಯಂವೇದ್ಯ ಮನವಿಯನ್ನು ಪರಿಗಣಿಸಿ ಈ ತಕ್ಷಣದಿಂದಲೇ ಜಾರಿಗೆ ಬಂದಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ತೀರ್ಮಾನ** | **ದಿನಾಂಕ : 21.11.2023 ರಂದು ಜರುಗಿದ "ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆ"ಯಲ್ಲಿ ಮಂಡಿಸಲಾಗಿದ್ದ ಸಂಖ್ಯೆ 5.4, 5.14, 5.32 ಮತ್ತು 5.36ರ ವಿಷಯಗಳಿಗೆ ಸಂಬಂಧಿಸಿದಂತೆ ತಿದ್ದುಪಡಿಯಾದ ಮೇಲ್ಕಂಡ ನಡವಳಿಯನ್ನು ಸೇರ್ಪಡೆಗೊಳಿಸುವುದರೊಂದಿಗೆ ದೃಢೀಕರಿಸಲಾಯಿತು.** |
| **ಸಾಮಾನ್ಯ ಸಭೆ 2023/6.1** | 06 ಸಂಶೋಧನಾ ವಿದ್ಯಾರ್ಥಿಗಳು ಎರಡನೇ ಭಾರಿ ಹೆಚ್ಚುವರಿ ಸಂಶೋಧನಾ ವಿಸ್ತರಣೆ ಕೋರಿರುವ ಬಗ್ಗೆ. |
| | ಕುಲಸಚಿವರು (ಪರೀಕ್ಷಾಂಗ) ಮಾತನಾಡಿ, 06 ಸಂಶೋಧನಾ ವಿದ್ಯಾರ್ಥಿಗಳು ಪಿಹೆಚ್.ಡಿ ನಿಯಮಾವಳಿಗಳನ್ವಯ ಏಳು ವರ್ಷಗಳ ಸಂಶೋಧನಾ ಅವಧಿ ಪೂರ್ಣಗೊಂಡ ನಂತರ 06 ತಿಂಗಳುಗಳ ಹೆಚ್ಚುವರಿ ಕಾಲಾವಕಾಶವನ್ನು ರೂ.50,000/- ಗಳ ವಿಶೇಷ ದಂಡಶುಲ್ಕಗಳೊಂದಿಗೆ ಒಂದು ಭಾರಿ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ತದನಂತರ ಮತ್ತೊಮ್ಮೆ 06 ತಿಂಗಳುಗಳ ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆಯನ್ನು ಎರಡನೇ ಭಾರಿ ನೀಡುವಂತೆ ಮನವಿ ಸಲ್ಲಿಸಿರುತ್ತಾರೆ. ಇವರುಗಳಿಗೆ ಹೆಚ್ಚಿನ ದಂಡ ಶುಲ್ಕವನ್ನು ವಿಧಿಸುವುದರಿಂದ ಅನಿವಾರ್ಯವಿರುವ ಸಂಶೋಧಕರು ಮಾತ್ರ ವಿಸ್ತರಣೆ ಕೋರುತ್ತಾರೆ. ಇಲ್ಲವಾದಲ್ಲಿ ನಿಗಧಿತ ಅವಧಿಯಲ್ಲಿ ಸಂಶೋಧನೆಯನ್ನು ಪೂರ್ಣಗೊಳಿಸುತ್ತಾರೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಸಂಶೋಧನೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿರುವ ಸಂಖ್ಯೆಯು ದಿನೇ ದಿನೇ ಹೆಚ್ಚಾಗುತ್ತಿದೆ. ಈಗಾಗಲೇ ಸಂಶೋಧನಾಕಾರ್ಯ ಕೈಗೊಂಡಿರುವ ಸಂಶೋಧಕರು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಬೇಕಾಗಿರುವುದು ಕರ್ತವ್ಯವಾಗಿದೆ. ಒಂದಿಬ್ಬರು 06 ತಿಂಗಳುಗಳ ಹೆಚ್ಚುವರಿ ಕಾಲಾವಕಾಶವನ್ನು ಕೋರುವುದು ಸರಿಯಷ್ಟೆ. ಅಂತಹವರು ವಿಶೇಷ ಸಂದರ್ಭಗಳಲ್ಲಿ ಪುನಃ 06 ತಿಂಗಳುಗಳ ಹೆಚ್ಚುವರಿ ಕಾಲಾವಕಾಶ ಕೋರುವುದರಲ್ಲಿ ಅರ್ಥವಿರುತ್ತದೆ. ಆದರೆ, ಒಂದು ಬಾರಿ ವಿಸ್ತರಣೆ ಕೋರಿದ್ದ ನಂತರವೂ ಮತ್ತೆ ವಿಸ್ತರಣೆ ಕೋರುವವರ ಷರಾವನ್ನು ಗಮನಿಸಿದರೆ ಒಂದಿಬ್ಬರನ್ನು ಹೊರತುಪಡಿಸಿದರೆ, ಉಳಿದವರುಗಳ ಕಾರಣವು ಸೂಕ್ತವಾದುದಲ್ಲ ಅನ್ನಿಸುತ್ತಿದೆ. ಇವರುಗಳಿಗೆ ಎರಡು ಪಟ್ಟು ದಂಡ ಶುಲ್ಕವನ್ನು ವಿಧಿಸಿ ಅಂತಿಮವಾಗಿ ಮೂರು ತಿಂಗಳುಗಳ ಕಾಲಾವಕಾಶ ನೀಡಬಹುದೆಂದು ಅಭಿಪ್ರಾಯಿಸಿದರು. |

| | |
|---|---|
| ತೀರ್ಮಾನ | ಕೂಲಂಕಷವಾಗಿ ಚರ್ಚಿಸಿದ ನಂತರ ಸಿಂಡಿಕೇಟ್ 06 ಸಂಶೋಧನಾ ವಿದ್ಯಾರ್ಥಿಗಳಿಗೆ ಒಂದು ಲಕ್ಷ ರೂ.ಗಳ ದಂಡಶುಲ್ಕದೊಂದಿಗೆ ಎರಡನೇ ಭಾರಿಗೆ 06 ತಿಂಗಳುಗಳ ಹೆಚ್ಚುವರಿ ಕಾಲಾವಕಾಶವನ್ನು ಅಂತಿಮವಾಗಿ ನೀಡಲು ನಿರ್ಣಯಿಸಿತು. |
| ಸಾಮಾನ್ಯ ಸಭೆ 2023/6.2 | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು. |
| ತೀರ್ಮಾನ | ಪರೀಕ್ಷಾ ಅಕ್ರಮಕ್ಕೆ ಒಳಗಾಗಿರುವ ವಿದ್ಯಾರ್ಥಿಗಳಿಗೆ ರೂ. 5,000/-ಗಳ ದಂಡ ವಿಧಿಸಿ ಎಂಪಿಎಲ್‌ಇ ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/6.3 | ಮಾನವಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಎಂ.ಆರ್. ಗಂಗಾಧರ್, ಪ್ರಾಧ್ಯಾಪಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿ ನೇಮಕವಾಗಿರುತ್ತಾರೆ ಹಾಗೂ ಮಾನವಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯ ಪ್ರಕಾರ ಖಾಯಂ ಪ್ರಾಧ್ಯಾಪಕರಾಗಲೀ/ಸಹ ಪ್ರಾಧ್ಯಾಪಕರಾಗಲೀ ಯಾರು ಇರುವುದಿಲ್ಲ. ಸದರಿ ಅಧ್ಯಯನ ವಿಭಾಗದ ದೈನಂದಿನ ಕೆಲಸ ಕಾರ್ಯಗಳು ಸುಲಲಿತವಾಗಿ ಜರುಗುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಡಾ. ಕೆ. ಪ್ರಭು, ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 10-04-2023 ರಿಂದ ಜಾರಿಗೆ ಬಂದಂತೆ ಪ್ರಭಾರ ಅಧ್ಯಕ್ಷರನ್ನಾಗಿ ಮಾನವಶಾಸ್ತ್ರ ಅಧ್ಯಯನ ವಿಭಾಗಕ್ಕೆ ನೇಮಕ ಮಾಡಲಾಯಿತು. ಡಾ. ಕೆ.ಪ್ರಭು ಅವರು ದಿನಾಂಕ: 31-03-2024 ರಂದು ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದುತ್ತಿರುವುದನ್ನು ಸಿಂಡಿಕೇಟ್ ಸಭೆಯು ಗಮನಿಸಿತು.<br>ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ವಿಭಾಗದಲ್ಲಿ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು ಕಾರ್ಯನಿರ್ವಹಿಸುತ್ತಿರುವಾಗ rotation ಆಧಾರದ ಮೇಲೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತದೆ. ಒಂದು ವೇಳೆ ಆ ವಿಭಾಗದಲ್ಲಿ ಯಾರು ಖಾಯಂ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು ಇಲ್ಲದಿರುವಾಗ, ಆಯಾ ನಿಕಾಯದ ಡೀನರನ್ನು ನೇಮಕ ಮಾಡಬೇಕೆಂದು ಸುತ್ತೋಲೆಯನ್ನು ಹೊರಡಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br>ಕುಲಪತಿಗಳು ಮಾತನಾಡಿ, ದಿನೇ ದಿನೇ ವಯೋನಿವೃತ್ತಿ ಹೊಂದುತ್ತಿರುವ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರುಗಳ ಸಂಖ್ಯೆಯು ಹೆಚ್ಚಾಗಿದ್ದು, ಕೆಲವು ವಿಭಾಗಗಳಲ್ಲಿ ಯಾರೂ ಖಾಯಂ ಅಧ್ಯಾಪಕರುಗಳು ಇರುವುದಿಲ್ಲ ಮತ್ತು ಪ್ರಸ್ತುತ ಕಲಾ ನಿಕಾಯದ ಡೀನರು ಹಾಸನ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಹಾಸನದಲ್ಲಿ ಹಂಚಿಕೆಯಾಗಿರುವ ಬೋಧನಾ ಕಾರ್ಯಭಾರದೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ವಿಭಾಗದ ಪ್ರಭಾರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವುದು ತೊಂದರೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ವಿಷಯಕ್ಕೆ ಸಂಬಂಧಿಸಿದಂತಹ ವಿಭಾಗದ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರುಗಳನ್ನು ಅಥವಾ ಅಧ್ಯಯನ ವಿಭಾಗದ ವಿಷಯಕ್ಕೆ ಸಾಮೀಪ್ಯವಿರುವ ಇನ್ನೊಂದು ವಿಭಾಗದ ಪ್ರಾಧ್ಯಾಪಕರನ್ನು ಪ್ರಭಾರ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತದೆ.<br>ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಸ್ನಾತಕೋತ್ತರ ಕೇಂದ್ರಗಳನ್ನೊಳಗೊಂಡಂತೆ ಒಟ್ಟು 664 ಬೋಧಕ ವರ್ಗದ ಹುದ್ದೆಗಳಿದ್ದು, ಪ್ರಸ್ತುತ 287 ಖಾಯಂ ಬೋಧಕರು ಕಾರ್ಯನಿರ್ವಹಿಸುತ್ತಿದ್ದಾರೆಂದು ಸಭೆಯ ಗಮನಕ್ಕೆ ತಂದರು. |

| | |
|---|---|
| | ಡಾ. ಟಿ.ಆರ್. ಚಂದ್ರಶೇಖರ್ ಮತ್ತು ಶ್ರೀ ಗೋಕುಲ್ ಗೋವರ್ಧನ್ ಅವರುಗಳು ಮಾತನಾಡಿ, ಸಿಂಡಿಕೇಟ್‌ನ ನಿಯೋಗವು ಮಾನ್ಯ ರಾಜ್ಯಪಾಲರನ್ನು ಮತ್ತು ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಗುಣ ಮಟ್ಟವನ್ನು ಉಳಿಸಿಕೊಳ್ಳಲು ಬೋಧಕರುಗಳನ್ನು ನೇಮಕಾತಿ ಮಾಡಬೇಕೆಂದು ಮನವಿ ಸಲ್ಲಿಸಿದರೆ ಉತ್ತಮವೆಂದರು.<br>ಕುಲಸಚಿವರು ಮಾತನಾಡಿ, ಮಾನ್ಯ ಮುಖ್ಯ ಮಂತ್ರಿಗಳು ಎರಡು ತಿಂಗಳ ಹಿಂದೆ ಯುವರಾಜ ಕಾಲೇಜಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮೇಲೆ ಬಹಳ ಆಸ್ಥೆ ವ್ಯಕ್ತಪಡಿಸಿದ್ದು, ಶ್ರೀ ಗೋಕುಲ್ ಗೋವರ್ಧನ್ ಅವರು ತಿಳಿಸಿದಂತೆ ಖಾಯಂ ಅಧ್ಯಾಪಕರುಗಳ ಸಮಸ್ಯೆ ಸಂಬಂಧ ಮಾನ್ಯರ ಗಮನಕ್ಕೆ ತರುವುದರಿಂದ, ಸಕಾರಾತ್ಮಕವಾಗಿ ಸ್ಪಂದಿಸಬಹುದು ಮತ್ತು ವಿಶ್ವವಿದ್ಯಾನಿಲಯದ ಪೂರ್ಣ ಮಾಹಿತಿಯು ಮಾನ್ಯ ಮುಖ್ಯ ಮಂತ್ರಿಯವರಿಗೆ ತಿಳಿದಿರುತ್ತದೆಂದು ಸಭೆಗೆ ತಿಳಿಸಿದರು.<br>ಕುಲಪತಿಗಳು ಮಾತನಾಡಿ, ಸರ್ಕಾರದಿಂದ ಸಿಂಡಿಕೇಟ್ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಿದ ನಂತರ ಒಗ್ಗಟ್ಟಾಗಿ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದರೆ ಸೂಕ್ತವೆನಿಸುತ್ತದೆ ಎಂದರು.<br>ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ, ಮಾನ್ಯ ಮುಖ್ಯ ಮಂತ್ರಿಯವರ ಒತ್ತಡದಲ್ಲಿ ಕಡತಗಳು ignore ಆಗುತ್ತದೆ. ಲಿಖಿತವಾಗಿ ಮನವಿಯನ್ನು ಸಲ್ಲಿಸುವುದರ ಬದಲು ನೇರವಾಗಿ ಭೇಟಿ ಮಾಡಿ ಮನವಿ ಸಲ್ಲಿಸಬೇಕು. ಸರ್ಕಾರವು ಸಿಂಡಿಕೇಟ್ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವ ಮೊದಲೇ ಒಂದೆರೆಡು ಬಾರಿ ಸಿಂಡಿಕೇಟ್ ಆಯೋಗ ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡುವುದು ದಾಖಲೆಯಾಗುತ್ತದೆ. ತದನಂತರವೂ ಒಂದೆರೆಡು ಬಾರಿ ಭೇಟಿ ನೀಡಬಹುದೆಂದು ಸಲಹೆ ನೀಡಿದರು. ಹಾಗೆಯೇ, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿನ ಅಧ್ಯಕ್ಷರ ನೇಮಕಾತಿಯನ್ನು ಕುಲಪತಿಯವರ ವಿವೇಚನೆಗೆ ಬಿಡುವುದು ಸೂಕ್ತವೆಂದರು. |
| ತೀರ್ಮಾನ | ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಅಧ್ಯಕ್ಷರನ್ನು ನೇಮಕ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/6.4 | ಭೂ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ಡಿ. ನಾಗರಾಜು, ಪ್ರಾಧ್ಯಾಪಕರು, ಭೂ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 06-02-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಭೂವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/6.5 | ಸಸ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ರಾಜಕುಮಾರ್ ಹೆಚ್ ಗರಂಪಲ್ಲಿ, ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 19-03-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2023/6.6 | ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ಎಂ.ಎಸ್.ಕೃಷ್ಣ, ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01-02-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/6.7 | ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ಶೀಲಾ.ಜಿ, ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01-03-2024 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/6.8 | ದಿನಾಂಕ : 16-06-2023ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸುವ ಬಗೆಗೆ. |
| ತೀರ್ಮಾನ | ದಿನಾಂಕ : 16-06-2023ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/6.9 | ಸಂಯೋಜಕರು, ಯೋಗ ವಿಜ್ಞಾನ ಕಾರ್ಯಕ್ರಮ, ಮಾನಸಗಂಗೋತ್ರಿ, ಮೈಸೂರು ಇವರ ಪದನಾಮದಲ್ಲಿ ಬ್ಯಾಂಕ್‌ನಲ್ಲಿ ಹೊಸ ಉಳಿತಾಯ ಖಾತೆಯನ್ನು ತೆರೆಯಲು ಅನುಮತಿ ನೀಡಿರುವ ವಿಷಯವನ್ನು ಅನುಸಮರ್ಥಿಸುವ ಬಗ್ಗೆ. |
| ತೀರ್ಮಾನ | ಹಣಕಾಸು ಸಮಿತಿ ಸಭೆಯ ತೀರ್ಮಾನದಂತೆ ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಕಾಯ್ದಿರಿಸಿ, ಸಂಯೋಜಕರು, ಯೋಗ ವಿಜ್ಞಾನ ಕಾರ್ಯಕ್ರಮ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸಂಯೋಜಕರು, ಯೋಗ ವಿಜ್ಞಾನ ಕಾರ್ಯಕ್ರಮ, ಮಾನಸಗಂಗೋತ್ರಿ, ಮೈಸೂರು ಇವರ ಪದನಾಮದಲ್ಲಿ ಹೊಸ ಉಳಿತಾಯ ಖಾತೆಯನ್ನು ತೆರೆದು, ಹಣಕಾಸಿನ ವ್ಯವಹಾರವನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯದಿಂದ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/6.10 | ಶ್ರೀ ಟಿ.ಸಿ. ನಾರಾಯಣ, ಹಿರಿಯ ಸಹಾಯಕರು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇವರಿಗೆ ನೀಡಿರುವ ಪದೋನ್ನತಿಯನ್ನು ಹಿಂಪಡೆಯುವ ಕುರಿತು. |
| | ಕುಲಸಚಿವರು ಮಾತನಾಡಿ ಶ್ರೀ ಟಿ.ಸಿ. ನಾರಾಯಣ, ಹಿರಿಯ ಸಹಾಯಕರು, ಆಡಳಿತಾಧಿಕಾರಿಗಳ ಕಛೇರಿ, ಇವರ ತಂದೆಯವರು ವಿಶ್ವವಿದ್ಯಾನಿಲಯಕ್ಕೆ 27 ಗುಂಟೆ ಜಮೀನನ್ನು ಕ್ರಯಕ್ಕೆ ನೀಡಿದ್ದರಿಂದ ಶ್ರೀ ಟಿ.ಸಿ. ನಾರಾಯಣರವರನ್ನು 1995ರಲ್ಲಿ ತಾತ್ಕಾಲಿಕ ದ್ವಿತೀಯ ದರ್ಜೆ ಗುಮಾಸ್ತರನ್ನಾಗಿ ನೇಮಕ ಮಾಡಿದ್ದು, ಉಮಾದೇವಿ |

ಪ್ರಕರಣದಡಿಯಲ್ಲಿ ಸುಪ್ರಿಂ ಕೋರ್ಟ್‌ನ ತೀರ್ಪಿನನ್ವಯ ದಿನಾಂಕ : 1.8.2006ರಲ್ಲಿ 35 ಮಂದಿ ನೌಕರರನ್ನು ಖಾಯಂಗೊಳಿಸಲಾಯಿತು. ಅದರಲ್ಲಿ ಶ್ರೀ ಟಿ.ಸಿ. ನಾರಾಯಣರು ಒಬ್ಬರು. ಶ್ರೀ ಟಿ.ಸಿ. ನಾರಾಯಣರವರು ದಿನಾಂಕ : 17.12.2016 ರಂದು ಮನವಿ ಸಲ್ಲಿಸಿ, ಸರ್ಕಾರದ ಅಧಿಸೂಚನೆಯನ್ವಯ ಯೋಜನಾ ನಿರಾಶ್ರಿತರ ಅಡಿಯಲ್ಲಿ ತಾತ್ಕಾಲಿಕವಾಗಿ ಸಲ್ಲಿಸಿರುವ ಸೇವೆಯನ್ನು ಖಾಯಂ ಸೇವೆಯಾಗಿ ಪರಿಗಣಿಸಿ, ಸೇವಾ ಹಿರಿತನ ಮತ್ತು ಸೇವಾ ಸೌಲಭ್ಯಗಳನ್ನು ದಿನಾಂಕ 13.01.1995ರಿಂದ ವಿಸ್ತರಿಸಬೇಕೆಂದು ಮನವಿಯನ್ನು ಮಾಡಿರುತ್ತಾರೆ.

ಕರ್ನಾಟಕ ಸಿವಿಲ್ ಸರ್ವಿಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977, ರೂಲ್ ನಂ. 9, ತಿದ್ದುಪಡಿಯಾಗಿರುವಂತೆ ಯೋಜನಾ ನಿರಾಶ್ರಿತರರೆಂದರೆ ಸರ್ಕಾರದ ಅಗತ್ಯ ಯೋಜನೆಗಳಿಗೆ ಅಂದರೆ ನೀರಾವರಿ, ಕುಡಿಯುವ ನೀರು ಅಥವಾ ರಸ್ತೆಗಳಿರಬಹುದು ಹಾಗೂ ಇನ್ನಿತರ ಯೋಜನೆಗಳಿಗೆ ಭೂಸ್ವಾಧೀನ ಕಾಯ್ದೆಯನುಸಾರ ಸ್ವಾಧೀನವಾಗಿದ್ದರೆ ಹಾಗೂ ಅವರ ಶೇ. 50ರಷ್ಟು ಜಮೀನು ಭೂಸ್ವಾಧೀನವಾಗಿದ್ದಲ್ಲಿ ಯೋಜನಾ ನಿರಾಶ್ರಿತರ ಯೋಜನೆಗೆ ಒಳಪಡುತ್ತಾರೆ. ಇದರಡಿಯಲ್ಲಿ ಅವರು ನೇರ ನೇಮಕಾತಿಗೆ ಮಾತ್ರ ಅರ್ಹರಿರುತ್ತಾರೆ ಎಂದು ತಿಳಿಸಿದರು. KCSR General Recruitment ರೂಲ್ಸ್‌ನ 57ನೇ ತಿದ್ದುಪಡಿಯಂತೆ ಈ ಯೋಜನೆಯು 2000 ರಿಂದ ಜಾರಿಗೆ ಬಂದಿದೆ. ಇದರಲ್ಲಿ ಶೇ. 5 ರಷ್ಟನ್ನು ಯೋಜನಾ ನಿರಾಶ್ರಿತರಿಗೆ ನೇರ ನೇಮಕಾತಿಯಡಿಯಲ್ಲಿ ನೇಮಕ ಮಾಡಿಕೊಳ್ಳುವ ಅವಕಾಶವನ್ನು ನೀಡಲಾಗಿದೆ.

ಶ್ರೀ ಟಿ.ಸಿ. ನಾರಾಯಣ ಅವರು ನಾನು ಯೋಜನಾ ನಿರಾಶ್ರಿತರ ಅಡಿಯಲ್ಲಿರುವುದರಿಂದ ನನ್ನ ನೇಮಕಾತಿಯನ್ನು 1995ರಿಂದ ಜಾರಿಗೆ ಬಂದಂತೆ ಎಲ್ಲಾ ಸೌಲಭ್ಯಗಳನ್ನು ನೀಡಬೇಕೆಂದು ಕೋರಿದ್ದಾರೆ. ಅದರಂತೆ ಕಳೆದ ಪ್ರಾಧಿಕಾರಗಳ ಸಭೆಯಲ್ಲಿ ಅವರಿಗೆ 6 ವೇತನ ಬಡ್ತಿಗಳನ್ನು ನೀಡಿ, ಹಿರಿಯ ಸಹಾಯಕರಾಗಿ ಬಡ್ತಿಯನ್ನು ನೀಡಲಾಗಿದೆ. Supernumerary ಹುದ್ದೆ ಎಂದು ಸೃಜನೆ ಮಾಡಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಆದೇಶವನ್ನು ನೀಡಿದ್ದಾರೆ. ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಚರ್ಚೆಯಾಗಿ ಅನುಸಮರ್ಥನೆಯನ್ನು ಪಡೆಯಲಾಗಿರುತ್ತದೆ. ನಂತರ ಈ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಇದು ನಿಯಮಬಾಹಿರವಾಗಿರುವುದು ಎಂದು ತಿಳಿದುಬಂದಿದೆ. ಈ ರೀತಿ Supernumerary ಹುದ್ದೆಗಳು ಅಥವಾ ಸಂಖ್ಯಾತಿರಿಕ್ತ ಹುದ್ದೆಗಳನ್ನು ಸೃಜಿಸಬೇಕಾದಲ್ಲಿ KCSR ನಿಯಮ 100(9)ರ ಅನ್ವಯ ಸರ್ಕಾರದ ಅನುಮತಿ ಕಡ್ಡಾಯವಾಗಿರುತ್ತದೆ. ಹೊಸ ಹುದ್ದೆಗಳನ್ನು ಸೃಜಿಸುವುದಕ್ಕೆ ಮಾನ್ಯ ಕುಲಪತಿಗಳಿಗಾಗಲಿ, ಸಿಂಡಿಕೇಟ್ ಸಭೆಗಾಗಲಿ ಅವಕಾಶವಿರುವುದಿಲ್ಲ. ಈ ವಿಷಯದ ಬಗ್ಗೆ ಸರ್ಕಾರದ ಅನುಮತಿಯನ್ನು ಪಡೆದ ನಂತರವೇ ಹುದ್ದೆಯ ಸೃಜನೆ ಮಾಡಬೇಕಾಗಿರುತ್ತದೆ ಎಂದು ತಿಳಿಸಿದರು. ಮತ್ತು ಸಂಖ್ಯಾತಿರಿಕ್ತ ಹುದ್ದೆಯ ಬಗ್ಗೆ ಯಾವ ರೀತಿ ನೇಮಕಾತಿ ಮಾಡಬೇಕೆಂಬುದರ ಬಗ್ಗೆ ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನೀವು ತಮ್ಮ ಪ್ರಸ್ತಾಪದಲ್ಲಿ ನೀಡಿರುವ ಸಂಖ್ಯೆ 1 ರಿಂದ 8 ರವರೆಗಿನ ವಿಷಯದ ಮಾಹಿತಿಯನ್ನು ಓದಬೇಕೆಂದು ಕುಲಸಚಿವರನ್ನು ಕೋರಿದರು.

ಕುಲಸಚಿವರು 1 ಮತ್ತು 2 ವಿಷಯಗಳನ್ನು ಸಭೆಗೆ ಓದಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಸಂಖ್ಯೆ 1 ಮತ್ತು 2ರ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ 28 ವರ್ಷಗಳ ಹಳೆಯ ಪ್ರಕರಣವಾಗಿರುವುದರಿಂದ ಈ ವಿಷಯವು ಈಗ ಅಪ್ರಸ್ತುತವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ,ಕ್ರಮ ಸಂಖ್ಯೆ 3 ಕ್ಕೆ ಸಂಬಂಧಿಸಿದಂತೆ ಕಾನೂನು ಅಭಿಪ್ರಾಯವನ್ನು ಪಡೆದಿದ್ದೇವೆ ಎಂದು ತಿಳಿಸಿದ್ದೀರಿ, ಆದರೆ ಸಿಂಡಿಕೇಟ್ ಸಭೆಗೆ ಆ ದಾಖಲೆಯನ್ನು ಏಕೆ ಒದಗಿಸಿಲ್ಲವೆಂದು ಹಾಗೂ ಏಪ್ರಿಲ್ 2023 ಹಾಗೂ ಜೂನ್

2023 ರಾಜ್ಯ ಸರ್ಕಾರದ ಉಚ್ಛನ್ಯಾಯಾಲಯದ ಆದೇಶಗಳನ್ನು ವಕೀಲರಿಗೆ ನೀಡಿ ಕಾನೂನು ಅಭಿಪ್ರಾಯವನ್ನು ಪಡೆಯಲಾಗಿದೆಯೇ ಎಂದು ಕುಲಸಚಿವರನ್ನು ಪ್ರಶ್ನಿಸಿದರು.

ಕುಲಸಚಿವರು ಕಾನೂನು ಅಭಿಪ್ರಾಯ ಪಡೆದಿರುವ ದಾಖಲೆಯನ್ನು ಮುಂದೆ ಒದಗಿಸುವುದಾಗಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ,ಕ್ರಮ ಸಂಖ್ಯೆ 4ರ ವಿಷಯದಲ್ಲಿ ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಉದ್ಯೋಗಿಗಳ ಸಂಘ, ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕೇತರ ಆಡಳಿತ ವರ್ಗದ ಉದ್ಯೋಗಿಗಳ ಸಂಘದವರು ಶ್ರೀ ಟಿ.ಸಿ. ನಾರಾಯಣ್ ಅವರಿಗೆ ನೀಡಿರುವ ಪದೋನ್ನತಿಯನ್ನು ವಿರೋಧಿಸಿರುವ ವಿಚಾರವನ್ನು ಉಚ್ಛ ನ್ಯಾಯಾಲಯದ ಆದೇಶ ಬಂದ ನಂತರ ಸಭೆಗೆ ಪ್ರಸ್ತುತಪಡಿಸಿರುವುದು ಉಚಿತವಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ,ಕ್ರಮ ಸಂಖ್ಯೆ 5ರ ವಿಷಯದಲ್ಲಿ ಶ್ರೀ ಎಂ.ಎನ್. ಸತ್ಯರಾಜೇ ಅರಸ್ ಅವರು ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿದ್ದು, ಕೋರ್ಟಿಂದ ಯಾವುದಾದರೂ ಸ್ಟೇ ಅಥವಾ ನೋಟಿಸ್ ಜಾರಿಗೊಳಿಸಿದ್ದಾರೆಯೇ ಎಂದು ಪ್ರಶ್ನಿಸಿದರು. ಶ್ರೀ ಎಂ.ಎನ್. ಸತ್ಯರಾಜೇ ಅರಸ್ ಅವರು ಹೂಡಿರುವ ಮೊಕದ್ದಮೆಯು ವೈಯಕ್ತಿಕವಾಗಿರುತ್ತದೆ. ಹಾಗಾಗಿ ಯಾವುದೇ ಉಚ್ಛನ್ಯಾಯಾಲಯದಿಂದ ಯಾವುದೇ ಮಧ್ಯಂತರ ಆದೇಶ ನೀಡದಿರುವುದರಿಂದ ಈ ಪ್ರಸ್ತಾವನೆಯನ್ನು ಸಿಂಡಿಕೇಟ್‌ಗೆ ತಂದಿರುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಶ್ರೀ ಎಂ.ಎನ್. ಸತ್ಯರಾಜೇ ಅರಸ್ ರವರು ಸಹ ವಿಶ್ವವಿದ್ಯಾನಿಲಯದ ಉದ್ಯೋಗಿಯಾಗಿದ್ದು, ಈ ವಿಷಯವು ಒಬ್ಬರಿಗೆ ಮೀಸಲಾಗದೆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಕ್ರಮ ಸಂಖ್ಯೆ 6ರ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಸುತ್ತೋಲೆಯ ಪ್ರಕಾರ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಜಾರಿಗೊಳಿಸುವ ನಿಯಮಗಳನ್ನು ಅಳವಡಿಸಿಕೊಳ್ಳದೆ ನೇಮಕಾತಿ ಅಥವಾ ಮುಂಬಡ್ತಿಗಳನ್ನು ನೀಡಿದ್ದಲ್ಲಿ ಆರ್ಥಿಕ ನಷ್ಟವನ್ನು ಅವರಿಂದಲೇ ವಸೂಲಿ ಮಾಡಲಾಗುವುದು ಎಂದು ಹಾಗೂ ಸರ್ಕಾರದ ಯಾವುದೇ ಸಹಾಯಾನುದಾನವನ್ನು ಒಗಿಸುವುದಿಲ್ಲ ಅಥವಾ ಬಳಸುವಂತಿಲ್ಲವೆಂದು ಹಾಗೆಯೇ ಯಾರು ಫಲಾನುಭವಿಗಳರುತ್ತಾರೆಯೋ ಅವರೇ ನಷ್ಟವನ್ನು ಭರಿಸಬೇಕಾಗುತ್ತದೆ ಎಂಬ ಪ್ರಸ್ತಾಪನೆಯನ್ನು ಸಲ್ಲಿಸಿದ್ದೀರಿ. ಆದರೆ ಸದರಿ ಪ್ರಸ್ತಾವನೆ ಸರಿ ಇದೆ. ಆದರೆ ಶ್ರೀ ಟಿ.ಸಿ. ನಾರಾಯಣ್ ಅವರಿಗೆ ನೀಡಿರುವ ಪದೋನ್ನತಿ ಹಿಂಪಡೆಯುವುದಕ್ಕೆ ಅನ್ವಯಿಸುವುದಿಲ್ಲವೆಂದು ತಿಳಿಸಿದರು. ಈಗ ನಮ್ಮ ಮುಂದೆ ಇರುವುದು ನ್ಯಾಯಾಲಯ ನೀಡಿರುವ ಆದೇಶವನ್ನು ಪಾಲಿಸುವುದೋ ಅಥವಾ ನೀವು ತಿಳಿಸಿರುವ ಸರ್ಕಾರದ ಆದೇಶವನ್ನು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದೋ ಎಂದು ಸಭೆಗೆ ಪ್ರಶ್ನಿಸಿದರು. ಈ ವಿಚಾರದಲ್ಲಿ ಉಚ್ಛನ್ಯಾಯಾಲಯದ ಆದೇಶ ಹಾಗೂ ಸರ್ಕಾರದ ಆದೇಶ ಇವುಗಳಲ್ಲಿ ಯಾವುದೇ ಶ್ರೇಷ್ಠ ಅಥವಾ ನಾವು ಯಾವುದನ್ನು ಪಾಲಿಸಬೇಕು ಎಂದು ಸಭೆಯಲ್ಲಿ ಪ್ರಶ್ನಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಕ್ರಮ ಸಂಖ್ಯೆ 7ರ ವಿಷಯಕ್ಕೆ ಸಂಬಂಧಿಸಿದಂತೆ ಪದೋನ್ನತಿ ಹಿಂಪಡೆಯುವ ವಿಚಾರ ನಿಯಮಗಳಿಗೆ ವಿರುದ್ಧವಾಗಿದೆ ಎಂದು ತಿಳಿಸಿರುತ್ತೀರಿ, ಹಾಗಾದರೆ ಈ ಪ್ರಕರಣವು ನಿಯಮಬಾಹಿರವಾಗಿಲ್ಲವೆಂದಾದರೆ ಇದನ್ನು ಸಾಬೀತು ಮಾಡಿ ಎಂದು ಸಭೆಗೆ ಪ್ರಶ್ನಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಕ್ರಮ ಸಂಖ್ಯೆ 8ರ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಲೆಕ್ಕ ಪರಿಶೋಧಕರ ಆಕ್ಷೇಪಣೆ ಇರುವುದೆಂದು ತಿಳಿಸಿದ್ದೀರಿ. ಹಾಗೂ 1.8.2006ರಲ್ಲಿನ ಶ್ರೀಮತಿ ಉಮಾದೇವಿ ಅವರ ಪ್ರಕರಣವನ್ನು ಸಹ ತಾವು

ಪ್ರಸ್ತಾಪಿಸಿರುತ್ತೀರಿ, ಆದರೆ ವಾಸ್ತವವಾಗಿ ಸರ್ಕಾರಿ ಲೆಕ್ಕ ಪರಿಶೋಧಕರ ಇಲಾಖೆಯಿಂದ ಬಂದಿರುವ ಪತ್ರದಲ್ಲಿ ಕೇವಲ ಶ್ರೀ ಎಂ.ಎನ್. ಸತ್ಯರಾಜೇ ಅರಸ್ ಅವರು ಮಾಡಿಕೊಂಡಿರುವ ಮನವಿಯನ್ನು ಮಾತ್ರ ಪ್ರಸ್ತಾಪಿಸಿರುತ್ತಾರೆ. ಹಾಗೂ ಆ ವ್ಯಕ್ತಿಯ ಪತ್ರದಲ್ಲಿ ದಿನಾಂಕ ನಮೂದಿಸಿಲ್ಲವೆಂದು ಆಕ್ಷೇಪಣೆ ಮಾಡಿರುತ್ತಾರೆ. ಹಾಗೂ ಸದರಿ ವಿಷಯವು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಆಡಳಿತಾತ್ಮಕ ವಿಷಯವಾಗಿದ್ದು ಈ ಬಗ್ಗೆ ತಮ್ಮಿಂದಲೇ ಕ್ರಮಕೈಗೊಳ್ಳಬೇಕೆಂದು ತಿಳಿಸಿರುತ್ತಾರೆ. ಜೊತೆಗೆ ಈ ಪತ್ರದಲ್ಲಿ ಶ್ರೀ ಟಿ.ಸಿ. ನಾರಾಯಣ ಅವರ ನೇಮಕಾತಿ ಮಾಡಿದ ಸಂದರ್ಭದಲ್ಲಿ 35 ಮಂದಿ ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸಲಾಗಿರುವ ಕ್ರಮವನ್ನು ಸಹ ಪ್ರಶ್ನಿಸಿದ್ದಾರೆ. ಈ ವಿಷಯದಲ್ಲಿ ತಾವು ಏನು ಕ್ರಮಕೈಗೊಂಡಿದ್ದೀರಿ ಎಂದು ಸಹ ಪ್ರಶ್ನಿಸಿದರು.

ದಿನಾಂಕ 9.6.2023ರ ಲೆಕ್ಕ ಪರಿಶೋಧಕರ ಪತ್ರ ಬಂದಾಗ ಅವರಿಗೆ ಶ್ರೀ ಎಂ.ಎನ್. ಸತ್ಯರಾಜೇ ಅರಸ್ ಅವರು ಲೆಕ್ಕ ಪರಿಶೋಧಕರಿಗೆ ಶ್ರೀ ಟಿ.ಸಿ. ನಾರಾಯಣ್ ಅವರಿಗೆ ಸಂಬಂಧಿಸಿದಂತೆ ಉಚ್ಚನ್ಯಾಯಾಲಯದಲ್ಲಿ ನೀಡಿರುವಂತಹ ಆದೇಶಗಳನ್ನು ಲೆಕ್ಕ ಪರಿಶೋಧಕರ ಗಮನಕ್ಕೆ ತರಲಾಗಿದೆಯೇ ಎಂದು ಪ್ರಶ್ನಿಸಿದರು. ಈ ಹಿಂದೆ ಶ್ರೀ ಎಂ.ಎನ್. ಸತ್ಯರಾಜೇ ಅರಸ್ ಅವರು ಲೆಕ್ಕ ಪರಿಶೋಧಕರಿಗೆ ಪತ್ರ ನೀಡಿದ ಸಂದರ್ಭದಲ್ಲಿ ಈ ಉಚ್ಚನ್ಯಾಯಾಲಯದ ಆದೇಶವನ್ನು ನೀಡಿದ್ದರೆ ಲೆಕ್ಕ ಪರಿಶೋಧಕರು ನಮಗೆ ಪತ್ರವನ್ನು ಬರೆಯುತ್ತಿರಲಿಲ್ಲ, ಹಾಗಾಗಿ ಈ ಶ್ರೀ ಟಿ.ಸಿ. ನಾರಾಯಣ ಅವರ ಪ್ರಕರಣದಲ್ಲಿ ಲೆಕ್ಕ ಪರಿಶೋಧಕರ ಪತ್ರ ಅಪ್ರಸ್ತುತ ಹಾಗೂ ಅನ್ವಯಿಸುವುದಿಲ್ಲವೆಂದು ತಿಳಿಸಿದರು.

ಶ್ರೀ ಟಿ.ಸಿ. ನಾರಾಯಣ್ ಅವರಿಗೆ ನೀಡಿರುವ ಪದೋನ್ನತಿಯು ನಿಯಮಬಾಹಿರವೆಂದು ತಿಳಿಸಿ, ಮೇಲ್ಕಾಣಿಸಿರುವ ಕ್ರ.ಸಂಖ್ಯೆ 1 ರಿಂದ 8ರವರೆಗೆ ಉಲ್ಲೇಖಿಸಿರುವ ಎಲ್ಲಾ ಅಂಶಗಳನ್ನು ತಿಳಿಸಿರುವುದರ ಜೊತೆಗೆ ಇದೇ ಪ್ರಸ್ತಾವನೆಯಲ್ಲಿ ಹಿಂದೆ ನಡೆದಂತಹ ಸಿಂಡಿಕೇಟ್ ಸಭೆಗಳಲ್ಲಿ ಟಿ.ಸಿ. ನಾರಾಯಣ್ ಅವರಿಗೆ ನೀಡಿರುವ ಪದೋನ್ನತಿಯನ್ನು ನಿಯಮಬಾಹಿರವೆಂದು ಹಿಂಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತೀರಿ. ಆದರೆ ಹಿಂದೆ ಇದ್ದಂತಹ ಕುಲಸಚಿವರು ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಹಾಗೂ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪದೋನ್ನತಿ ನೀಡಿ ಆದೇಶವನ್ನು ಹೊರಡಿಸಿದ್ದಾರೆ. ಆ ಆದೇಶವು ಊರ್ಜಿತವಲ್ಲವೇ? ಹಾಗೂ ಅಂದು ನೀಡಿದಂತಹ ಕಾನೂನು ಅಭಿಪ್ರಾಯಕ್ಕೆ ಬೆಲೆ ಇಲ್ಲವೇ? ಅಂದಿನ ಸಿಂಡಿಕೇಟ್ ಸಭೆಗೆ ಬೆಲೆ ಇಲ್ಲವೇ, ಅವರು ಮಾಡಿರುವ ಸಿಂಡಿಕೇಟ್ ತಪ್ಪು, ನಾವು ಮಾಡಿರುವ ಸಿಂಡಿಕೇಟ್ ಸರಿ ಎಂಬುದು ಹೇಗೆ ಸರಿಹೋಗುತ್ತದೆ ಎಂದು ಪ್ರಶ್ನಿಸಿದರು.

ಕುಲಸಚಿವರು ಮಾತನಾಡಿ ಈ ವಿಷಯವು ಕರ್ನಾಟಕ ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಪ್ರಕರಣವಾಗಿ ದಾಖಲಾಗಿದ್ದು, ನ್ಯಾಯಾಲಯದ ಆದೇಶಾನುಸಾರ ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ ಎಂದು ತಿಳಿಸಿ, ಸರ್ಕಾರದ ಅನುಮತಿ ಇಲ್ಲದೆ ಇವರಿಗೆ ಸಂಖ್ಯಾತಿರಿಕ್ತ ಹುದ್ದೆಯನ್ನು ಸೃಜಿಸಿ ನೀಡಲು ಬರುವುದಿಲ್ಲವೆಂದು ಹಾಗೂ ಸಿಂಡಿಕೇಟ್ ಸಭೆಗೆ ಗೌರವ ಕೊಡುವುದರ ಜೊತೆಗೆ ಕಾನೂನಿಗೆ ಗೌರವವನ್ನು ನೀಡುವುದು ವಿಶ್ವವಿದ್ಯಾನಿಲಯದ ಕರ್ತವ್ಯವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಯಾವುದೇ ಉದ್ಯೋಗಿಗೆ ನಾವು ಬಡ್ತಿ ಅಥವಾ ಇನ್ಯಾವುದೇ ವಿಷಯದಲ್ಲಿ ಸೌಲಭ್ಯವನ್ನು ಒದಗಿಸಿದ್ದಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಉದ್ಯೋಗಿಗಳು ಅದರ ಬಗ್ಗೆ ಪ್ರಶ್ನಿಸುವ ಅಥವಾ ಮನವಿಯನ್ನು ಸಲ್ಲಿಸುವ ಸಂಭವವಿರುತ್ತದೆ. ಹಾಗೆಯೇ ಇವರು ಸಹ ವಿರೋಧವನ್ನು ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು. ಈಗಾಗಲೇ ಈ ವಿಷಯವು ನಡೆದು ಸುಮಾರು 10 ವರ್ಷಗಳು ಸಂದಿವೆ. ಈ ವಿಷಯದ ಬಗ್ಗೆ ಆಡಿಟ್ ಆಕ್ಷೇಪಣೆಯು ಆಗಿದೆ, ಆದ್ದರಿಂದ ಈ ವಿಷಯದ ಬಗ್ಗೆ ಒಂದು ತೀರ್ಮಾನವನ್ನು ಕೈಗೊಳ್ಳಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಶ್ರೀ ಟಿ.ಸಿ. ನಾರಾಯಣ್ ಅವರ ಪರವಾಗಿ ಏಪ್ರಿಲ್ ಮತ್ತು ಜೂನ್ ಮಾಹೆಯಲ್ಲಿ ಕೋರ್ಟಿನಿಂದ ಸ್ಪಷ್ಟವಾದ ನಿರ್ದೇಶನವು ಬಂದಿದೆ. ಶ್ರೀ ಟಿ.ಸಿ. ನಾರಾಯಣ್ ಅವರು ನೀಡಿದಂತಹ ಎಲ್ಲಾ ಮಾಹಿತಿಗಳನ್ನು ಕೋರ್ಟ್ ಪರಾಮರ್ಶಿಸಿ 8 ಅಥವಾ 10 ವಾರಗಳಲ್ಲಿ ಪುಟ ಸಂಖ್ಯೆ 70 ರಲ್ಲಿ ಉಲ್ಲೇಖಿಸಿರುವಂತೆ ಈ ವಿಷಯವನ್ನು 'Consider' ಮಾಡಿ ಎಂದು ತಿಳಿಸಿರುತ್ತದೆ. ಹಾಗಾದರೆ 'Consider' ಎಂದರೆ ಏನು ಎಂದು ಸಭೆಯಲ್ಲಿ ಮತ್ತೊಮ್ಮೆ ಪ್ರಶ್ನಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಶ್ರೀ ಟಿ.ಸಿ. ನಾರಾಯಣ್ ಅವರು ನನಗು ಸಹ ಕೋರ್ಟ್ ಆದೇಶವನ್ನು ತೋರಿಸಿ Consider ಮಾಡಲು ಕೋರ್ಟ್ ಆದೇಶಿಸಿರುವುದರಿಂದ ನನಗೆ ನ್ಯಾಯವನ್ನು ದೊರಕಿಸಿಕೊಡಿ ಎಂದು ಕೋರಿದ್ದರು. ನಾನು ಅವರಿಗೆ ನೀವು ಕೋರ್ಟಿಗೆ ಹೋಗುವ ಬದಲು ವಿಶ್ವವಿದ್ಯಾನಿಲಯಕ್ಕೆ ಅಥವಾ ಸಿಂಡಿಕೇಟ್‌ಗೆ ಈ ವಿಷಯನ್ನು ಕೋರಿದ್ದರೆ ನಾವೇ ಮರುಪರಿಶೀಲಿಸಿ ಕ್ರಮ ಕೈಗೊಳ್ಳಬಹುದಿತ್ತಲ್ಲ ಎಂಬ ಅಭಿಪ್ರಾಯವನ್ನು ಅವರಿಗೆ ತಿಳಿಸಿದ್ದೆ ಎಂದು ಹೇಳಿದರು. ಹಾಗೂ ಕೋರ್ಟಿನ ಆದೇಶದಂತೆ ವಿಶ್ವವಿದ್ಯಾನಿಲಯವೇ ಇದರ ಬಗ್ಗೆ ಅಭಿಪ್ರಾಯವನ್ನು 8 ಅಥವಾ 10 ವಾರಗಳಲ್ಲಿ ತಿಳಿಸುವಂತೆ ಸೂಚಿಸಿದೆ ಎಂದು ತಿಳಿಸಿದರು.

ಡಾ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ ಸರ್ಕಾರದ ಅನುಮೋದನೆಯನ್ನು ಪಡೆದು ಮಾಡಬಹುದು ಎಂದು ಅಭಿಪ್ರಾಯಿಸಿದರು.

ಕುಲಸಚಿವರು ಮಾತನಾಡಿ ಶ್ರೀ ಟಿ.ಸಿ. ನಾರಾಯಣ್ ಅವರು ಯೋಜನಾ ನಿರಾಶ್ರಿತರ ಕೋಟಾದಡಿ ಬರುವುದಿಲ್ಲವಾದ್ದರಿಂದ ಹಾಗೂ ರಾಜ್ಯ ಸರ್ಕಾರ ಹಾಗೂ ಹಣಕಾಸು ಇಲಾಖೆಯಿಂದ ಯಾವುದೇ ಅನುಮೋದನೆಯನ್ನು ಪಡೆಯದೆ ಹಾಗೂ ಕೆಸಿಎಸ್‌ಆರ್ ನಿಯಮಾವಳಿಯ ಪ್ರಕಾರ ಪದೋನ್ನತಿ ಮಾಡದಿರುವುದರಿಂದ ಇದು ನಿಯಮಬಾಹಿರವಾಗಿರುತ್ತದೆ ಎಂದು ಮತ್ತೊಮ್ಮೆ ಸಭೆಗೆ ತಿಳಿಸಿದರು.

ಶ್ರೀ ಸುರೇಶ್ ಕುಮಾರ್ ಅವರು ಮಾತನಾಡಿ ಉಚ್ಚನ್ಯಾಯಾಲಯದ ನಿರ್ದೇಶನದಂತೆ 8 ವಾರಗಳಲ್ಲಿ ಸಲ್ಲಿಸಬೇಕಾಗಿರುವುದರಿಂದ ಇಂದಿನ ಸಭೆಯಲ್ಲಿ ಶ್ರೀ ಟಿ.ಸಿ. ನಾರಾಯಣ್ ಅವರಿಗೆ ನೀಡಿರುವ ಎಲ್ಲಾ ಸೌಲಭ್ಯಗಳು ನಿಯಮಾವಳಿಯ ಪ್ರಕಾರ ಆಗಿದೆಯೇ ಇಲ್ಲವೇ ಎಂಬುದರ ಬಗ್ಗೆ ತೀರ್ಮಾನ ಕೈಗೊಳ್ಳುವುದು ಸೂಕ್ತವೆಂದು ಅಭಿಪ್ರಾಯಿಸಿದರು.

ಪ್ರೊ. ಟಿ.ಆರ್. ಮಾರುತಿ ಅವರು ಮಾತನಾಡಿ ಉಚ್ಚನ್ಯಾಯಾಲಯದ ಆದೇಶ Mandamus ಅಡಿಯಲ್ಲಿ ಶ್ರೀ ಟಿ.ಸಿ. ನಾರಾಯಣ್ ಅವರ ಮನವಿಯನ್ನು ಪರಿಗಣಿಸಬೇಕೆಂದು ಸ್ಪಷ್ಟ ನಿರ್ದೇಶನ ಕೋರ್ಟ್ ನೀಡಿರುವುದರಿಂದ ನಾವು ಕೋರ್ಟ್‌ನ ಆದೇಶವನ್ನು ಪಾಲಿಸಬೇಕಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕೆಸಿಎಸ್‌ಆರ್ ನಿಯಮ ಪ್ರಕಾರ ಹಾಗೂ ಕಾನೂನಾತ್ಮಕವಾಗಿ ಸಿಂಡಿಕೇಟ್ ಸಭೆಯು ನೇಮಕ ಮಾಡಿರುವುದರಿಂದ, ಹಾಗೂ ಶ್ರೀ ಟಿ.ಸಿ. ನಾರಾಯಣ್ ಅವರು ಕೋರ್ಟಿನ ಮೊರೆ ಹೋಗಿರುವುದರಿಂದ 8 ವಾರಗಳಲ್ಲಿ ಟಿ.ಸಿ. ನಾರಾಯಣ ಅವರ ನೇಮಕಾತಿ ಸರಿಯೋ ಇಲ್ಲವೋ ಎಂಬುದರ ಬಗ್ಗೆ ಮಾಹಿತಿಯನ್ನು ಒದಗಿಸಬೇಕಾಗಿರುವುದರಿಂದ ಸಿಂಡಿಕೇಟ್ ಸಭೆಯ ಸಮ್ಮತಿ ಬೇಕಾಗಿರುತ್ತದೆ ಎಂದು ತಿಳಿಸಿದರು.

ನಂತರ ಕುಲಸಚಿವರು ಮಾತನಾಡಿ ಶ್ರೀ ಟಿ.ಸಿ. ನಾರಾಯಣ ಅವರಿಗೆ ನೀಡಿರುವ ಖಾಯಂ ನೇಮಕಾತಿಯ ಬಗ್ಗೆ ಯಾರೂ ಇದುವರೆಗೂ ಪ್ರಶ್ನಿಸಿರುವುದಿಲ್ಲ. ಆದರೆ ಅವರಿಗೆ 6 ವೇತನ ಬಡ್ತಿ ಹಾಗೂ ಹಿರಿಯ ಸಹಾಯಕರಾಗಿ ನೀಡಿರುವ ಬಡ್ತಿಯನ್ನು ಮಾತ್ರ ಪ್ರಶ್ನಿಸಿದ್ದಾರೆ.

ಮಾನ್ಯ ಕುಲಪತಿಗಳು ಮಾತನಾಡಿ ನಾವು ಮೊದಲು ಉತ್ತರವನ್ನು ನೀಡೋಣ, ತದನಂತರದಲ್ಲಿ ಸದರಿಯವರು ಕೋರ್ಟಿಗೆ ಮೊರೆ ಹೋದಲ್ಲಿ ಕೋರ್ಟ್ ಯಾವ

| | |
|---|---|
| | ರೀತಿಯ ಮಾರ್ಗದರ್ಶನ ನೀಡುತ್ತದೋ ಅದರಂತೆ ಕ್ರಮವಹಿಸುವುದು ಸೂಕ್ತ ಎಂದು ಸೂಚಿಸಿದರು.<br><br>ಶ್ರೀ ಗೋವರ್ಧನ್ ಗೋಕುಲ್ ಅವರು ಮಾತನಾಡಿ ಶ್ರೀಮತಿ ನಿರ್ಮಲಾ ಅವರಿಗೆ ಬೆರಳಚ್ಚು ಗುಮಾಸ್ತ ಹುದ್ದೆಯಿಂದ ಶೀಘ್ರಲಿಪಿಗಾರರಾಗಿ ಬಡ್ತಿ ನೀಡಿರುತ್ತಾರೆ. ಆ ಕೇಸ್‌ನಲ್ಲಿ ಏನಾದರೂ ನಿಯಮ ಉಲ್ಲಂಘನೆಯಾಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸಬೇಕಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದಿಂದ ಶ್ರೀ ಟಿ.ಸಿ. ನಾರಾಯಣ್ ಅವರಿಗೆ ನೀಡಿರುವ ವೇತನ ಬಡ್ತಿ ಹಾಗೂ ಬಡ್ತಿ ನೀಡಿರುವ ಕ್ರಮವು ತಪ್ಪಾಗಿದೆ. ಆದ್ದರಿಂದ ತಪ್ಪಾಗಿರುವ ಕ್ರಮವನ್ನು ಸರಿಯೆಂದು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ. ಕಾನೂನು ತಜ್ಞರ ಅಭಿಪ್ರಾಯವನ್ನು ಪಡೆದು ಉಚ್ಚನ್ಯಾಯಾಲಯದ ಆದೇಶಾನುಸಾರ ಕ್ರಮವಹಿಸಬಹುದೆಂದು ಅಭಿಪ್ರಾಯಿಸಿದರು. ಜೊತೆಗೆ ವಿಶ್ವವಿದ್ಯಾನಿಲಯಕ್ಕೆ ತೊಂದರೆಯಾಗುವಂತಹ ಸಂದರ್ಭದಲ್ಲಿ ಮಾತ್ರ ಕೋರ್ಟಿನ ಮೊರೆಹೋಗಬಹುದು ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಸಿಂಡಿಕೇಟ್ ಸಭೆಯು ಶ್ರೀ ಟಿ.ಸಿ. ನಾರಾಯಣ್ ಅವರಿಗೆ ನೀಡಿರುವಂತಹ 6 ವೇತನ ಬಡ್ತಿ ಹಾಗೂ ಬಡ್ತಿಯ ಕ್ರಮವು ನಿಯಮಬಾಹಿರವಾಗಿರು–ವುದರಿಂದ, ಸಿಂಡಿಕೇಟ್ ಸಭೆಯು ಒಪ್ಪಿದ್ದಲ್ಲಿ ಈಗಾಗಲೇ ನೀಡಿರುವ ಸೌಲಭ್ಯಗಳನ್ನು ಹಿಂಪಡೆದು ಘನ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ನಿಯಮನುಸಾರ ಸೂಕ್ತ ಹಿಂಬರಹ ನೀಡಬೇಕೆಂಬುದನ್ನು ಸಭೆಗೆ ಪುನರುಚ್ಚರಿಸಿದರು.<br><br>ಶ್ರೀ ಸುರೇಶ್ ಕುಮಾರ್ ಅವರು ಮಾತನಾಡಿ ಉಚ್ಚ ನ್ಯಾಯಾಲಯದ ಆದೇಶದ ಅನ್ವಯ ಹಿಂಬರಹ ನೀಡಲು 8 ವಾರಗಳ ಕಾಲಾವಕಾಶವಿರುತ್ತದೆ. 8 ವಾರಗಳ ಒಳಗೆ ಮಾಹಿತಿಯನ್ನು ನೀಡಿದರೆ ಕೋರ್ಟ್ ಆಫ್ ಕಂಟೆಂಪ್ಟ್ ಆಗುವುದಿಲ್ಲ. ಆದ್ದರಿಂದ ಶ್ರೀ ಟಿ.ಸಿ. ನಾರಾಯಣ್ ಅವರಿಗೆ ನೀಡಿರುವ ಬಡ್ತಿಯ ಕ್ರಮವು ಕಾನೂನು ಬಾಹಿರವಾಗಿದ್ದಲ್ಲಿ, ನಿಯಮಾವಳಿ ಪ್ರಕಾರ ನಡೆಯದೆ ಇದ್ದಲ್ಲಿ ಕಾನೂನು ಪ್ರಕಾರ ಕ್ರಮವನ್ನು ಕೈಗೊಳ್ಳಬಹುದೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಈಗಾಗಲೇ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ಚರ್ಚೆಯಿಂದ ವಿಶ್ವವಿದ್ಯಾನಿಲಯಕ್ಕೆ ಸಹಾಯವಿಲ್ಲ. ಆದರೆ ಈ ವಿಷಯವು ಕಾನೂನಾತ್ಮಕವಾಗಿದೆಯೇ ಇಲ್ಲವೇ ಎಂಬುದೊಂದೆ ಪ್ರಶ್ನೆ. ಆದ್ದರಿಂದ ಈ ವಿಷಯವನ್ನು ಪರಾಮರ್ಶಿಸಿ ತೀರ್ಮಾನ ಕೈಗೊಳ್ಳುವುದು ಉಚಿತವೆಂದು ಹಾಗೂ ವಿಶ್ವವಿದ್ಯಾನಿಲಯದ ಅಧ್ಯಾಪಕ ಹಾಗೂ ಅಧ್ಯಾಪಕೇತರ ವೃಂದದವರೆಲ್ಲರ ಒಳಿತಿಗಾಗಿ ನಾವು ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಒಬ್ಬರ ಪರ ಅಥವಾ ವಿರೋಧವಿರುವುದಿಲ್ಲ ಎಂದು ತಿಳಿಸಿದರು.<br><br>ಶ್ರೀ ಗೋವರ್ಧನ್ ಗೋಕುಲ್ ಅವರು ಮಾತನಾಡಿ ನಾನು ಈಗಾಗಲೇ ಎರಡು ಪ್ರಕರಣಗಳನ್ನು ನೀಡಿದ್ದೀನಿ. ಶ್ರೀ ಟಿ.ಸಿ. ನಾರಾಯಣ್ ಅವರಿಗೆ ನೀಡಿರುವಂತೆಯೇ ಶ್ರೀ ಉಮೇಶ್ ಹಾಗೂ ಶ್ರೀಮತಿ ನಿರ್ಮಲಾ ಅವರಿಗೆ ನೀಡಿರುವ ಬಡ್ತಿಯ ಬಗ್ಗೆ ಪರಿಶೀಲಿಸುವುದು ಸೂಕ್ತವೆಂದರು. ಸಿಂಡಿಕೇಟ್‌ನ ಸಭೆಯ ಅನುಮೋದನೆ ಮೇರೆಗೆ ಈ ರೀತಿ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಬಾಹಿರವಾಗಿ, ನಿಯಮಾವಳಿ ಉಲ್ಲಂಘನೆ ಮಾಡಿ ಸರ್ಕಾರದ ಅನುಮತಿಯನ್ನು ಪಡೆಯದೆ ಬಡ್ತಿಯನ್ನು ನೀಡಿದ್ದಲ್ಲಿ ಅಧಿಕಾರಿಗಳಾದ ನೀವುಗಳೆ ಕ್ರಮ ಕೈಗೊಳ್ಳಬಹುದೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಯಾವುದೋ ಒಂದು ವಿಶ್ವವಿದ್ಯಾನಿಲಯವು ಕೋರ್ಟಿಗೆ ಸಂಬಂಧಿಸಿದ ವಿಷಯದಲ್ಲಿ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳದೆ ಇರುವುದರಿಂದ ಸಿಂಡಿಕೇಟ್‌ನ ಸದಸ್ಯರೆಲ್ಲರು ಸಹ ಕೋರ್ಟ್‌ಗೆ ಹೋಗಬೇಕಾದಂತಹ ಸಂದರ್ಭ ಬಂದೊದಗಿದೆ. ಆದ್ದರಿಂದ ನನಗೆ ತಿಳಿದಿರುವ ಜ್ಞಾನ, ಅರಿವು ಕಾನೂನಿನ ಹಾಗೂ ಅನುಭವದ ಪ್ರಕಾರ ನಾನೇನಾದರು ಈ |

| | |
|---|---|
| | ವಿಷಯಕ್ಕೆ ಸಮ್ಮತಿಯನ್ನು ನೀಡಿದ ಪಕ್ಷದಲ್ಲಿ ಕಂಟೆಪ್ಟ್ ಆಫ್ ಕೋರ್ಟ್ (ನ್ಯಾಯಾಂಗ ನಿಂದನೆ) ಆಗುತ್ತದೆ. ನಾನು ಕೋರ್ಟುಗೆ ಹೋಗಲು ಇಚ್ಛಿಸುವುದಿಲ್ಲ, ಆದ್ದರಿಂದ ಶ್ರೀ ಟಿ.ಸಿ. ನಾರಾಯಣ್ ಅವರ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರಿಗೆ ನೀಡಿರುವ ಪದೋನ್ನತಿಯನ್ನು ಹಿಂಪಡೆಯುವ ಸಿಂಡಿಕೇಟ್ ಪ್ರಸ್ತಾವನೆಗೆ ನನ್ನ (**DISSENT NOTE**) **ಸಮ್ಮತಿ ಇಲ್ಲ**ವೆಂದು ಹಾಗೂ ಇದನ್ನು ದಾಖಲಿಸುವಂತೆಯೂ ಸಹ ತಮ್ಮ ಅಂತಿಮ ಅಭಿಪ್ರಾಯವನ್ನು ಸಿಂಡಿಕೇಟ್ ಸಭೆಗೆ ತಿಳಿಸಿದರು. |
| **ತೀರ್ಮಾನ** | ಸುದೀರ್ಘ ಚರ್ಚೆಯ ನಂತರ, ಕರ್ನಾಟಕ ಉಚ್ಛನ್ಯಾಯಾಲಯದ W.P. No. 6404/2023 (S.Res)ರ ಆದೇಶದಂತೆ ಶ್ರೀ ಟಿ.ಸಿ. ನಾರಾಯಣ ಅವರಿಗೆ ಸಂಬಂಧಿಸಿದ ಪ್ರಕರಣವನ್ನು ಪರಿಶೀಲಿಸಿ, ಸಭೆಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಾಮರ್ಶಿಸಿದ ಸಭೆಯು ಸದರಿಯವರಿಗೆ ಈಗಾಗಲೇ ನೀಡಿರುವ ಹಿಂಬರಹವನ್ನು ಗಮನಿಸಿತಲ್ಲದೇ, ಇವರಿಗೆ ಯೋಜನಾ ನಿರಾಶ್ರಿತರ ಅಡಿಯಲ್ಲಿ ನೀಡಿರುವ ಸೌಲಭ್ಯಗಳನ್ನು ಕೆಸಿಎಸ್‌ಆರ್ ಮತ್ತು ಬೋಧಕೇತರ ಉದ್ಯೋಗಿಗಳ ಮುಂಬಡ್ತಿ ಅಧಿನಿಯಮಗಳನ್ವಯ ಹಿಂಪಡೆಯಲು ಸಿಂಡಿಕೇಟ್ ಅನುಮೋದಿಸಿತು.<br>ಡಾ. ಟಿ.ಆರ್. ಚಂದ್ರಶೇಖರ್ ಅವರು ಶ್ರೀ ಟಿ.ಸಿ. ನಾರಾಯಣ್ ಅವರ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅಸಮ್ಮತಿ (DISSENT NOTE) ವ್ಯಕ್ತಪಡಿಸಿರುತ್ತಾರೆ. |
| **ಸಾಮಾನ್ಯ ಸಭೆ 2023/6.11** | 2023-24ನೇ ಸಾಲಿನಲ್ಲಿ ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ದಿನಾಂಕ : 20-11-2023ರಂದು ನಡೆದ ಹಿಂದುಳಿದ ವರ್ಗಗಳ ಘಟಕದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸುವ ಬಗೆಗೆ. |
| **ತೀರ್ಮಾನ** | 2023-24ನೇ ಸಾಲಿನಲ್ಲಿ ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ದಿನಾಂಕ : 20-11-2023ರಂದು ನಡೆದ ಹಿಂದುಳಿದ ವರ್ಗಗಳ ಘಟಕದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2023/6.12** | ಅತಿಥಿ ಗೃಹದ ವಾಸ್ತವ್ಯಕ್ಕೆ ವಿದ್ಯಾರ್ಥಿಗಳಿಗೆ ದರ ನಿಗದಿಪಡಿಸುವ ಬಗ್ಗೆ. |
| **ತೀರ್ಮಾನ** | 2023-24ನೇ ಶೈಕ್ಷಣಿಕ ಸಾಲಿನಲ್ಲಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಡ್ಯಾನಿಡ ಅತಿಥಿ ಗೃಹ ಹಾಗೂ ಮಾನವ ಸಂಪನ್ಮೂಲ ವಸತಿ ಗೃಹಗಳಲ್ಲಿ ಹೊಸದಾಗಿ ಸೂಕ್ತ ದರ ನಿಗದಿಪಡಿಸಿ ಅವಕಾಶ ಕಲ್ಪಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2023/6.13** | ಮೆ. ವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೆ ಕನ್ನಡ ವಿಷಯ ವಿಶ್ವಕೋಶ 08 ಮತ್ತು 09ನೆಯ ಸಂಪುಟಗಳನ್ನು ಮುದ್ರಣ ಮಾಡಿರುವುದಕ್ಕೆ ಹಣ ಸಂದಾಯ ಮಾಡುವ ಬಗ್ಗೆ. |
| **ತೀರ್ಮಾನ** | ಮುಂದೂಡಲಾಯಿತು. |
| **ಸಾಮಾನ್ಯ ಸಭೆ 2023/6.14** | 2021-22 ಮತ್ತು 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು. |
| **ತೀರ್ಮಾನ** | ಮುಂದೂಡಲಾಯಿತು. |
| **ಸಾಮಾನ್ಯ ಸಭೆ 2023/6.15** | ಶ್ರೀಮತಿ ಎಸ್. ನೇತ್ರಾ, ಅಧೀಕ್ಷಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಶ್ರೀಮತಿ ಎಸ್.ನೇತ್ರಾ, ಅಧೀಕ್ಷಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 13-01-2024 ರಿಂದ 17-01-2024 ರವರೆಗೆ ಖಾಸಗಿಯಾಗಿ ತಮ್ಮ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಪ್ರವಾಸ ನಿಮಿತ್ತ ಮಾಲ್ಡೀವ್ಸ್‌ಗೆ ಹೋಗಿಬರಲು ಸಿಂಡಿಕೇಟ್ ಸಭೆಯು ಅನುಮತಿಸಿತು. |

| | |
|---|---|
| ಸಾಮಾನ್ಯ ಸಭೆ 2023/6.16 | ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ರತ್ನಸಿನ್ಹ, ವಾಣಿಜ್ಯಶಾಸ್ತ್ರ ವಿಭಾಗ, International School of Business and Research Center, ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ಸಂಶೋಧನಾ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿ. ಗಿರಿಧರ್ ಅವರಿಗೆ ಒಂದು ಲಕ್ಷ ರೂಪಾಯಿಗಳ ದಂಡ ಶುಲ್ಕವನ್ನು ವಿಧಿಸಿ 06 ತಿಂಗಳುಗಳ ಅವಧಿಗೆ ಮಾತ್ರ ಅಂತಿಮವಾಗಿ ಹೆಚ್ಚುವರಿ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2023/6.17 | "ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ"ವನ್ನು "ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ" ಎಂದು ಮರು ನಾಮಾಂಕಿತಗೊಳಸುವ ಬಗೆಗೆ. |
| ತೀರ್ಮಾನ | ದಿನಾಂಕ: 20-09-2023 ರಂದು ಜರುಗಿದ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ (ಯುಜಿಸಿ) ಸಭೆಯಲ್ಲಿ 111 ಕೇಂದ್ರಗಳನ್ನು ಮರುನಾಮಾಂಕಿತಗೊಳಸಲು ನಿರ್ಣಯಿಸಿರುವ ಹಿನ್ನೆಲೆಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯದ ಯು.ಜಿ.ಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ನಾಮಾಂಕಿತವನ್ನು **"ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ" (Malaviya Mission Teachers Training Centre-MMTTC)** ಎಂದು ಬದಲಾವಣೆ ಮಾಡಿ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/6.18 | ಶ್ರೀ ಮಲ್ಲನಾಥ್ ಪ್ರಸಾದ್, ನಿವೃತ್ತ ಪ್ರೋಗ್ರಾಮರ್, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ತಡೆಹಿಡಿದಿರುವ ಯುಜಿಸಿ 7ನೇ ವೇತನ/ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡುವ ಬಗ್ಗೆ. |
| | ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಹಣಕಾಸು ಅಧಿಕಾರಿಗಳಿಗೆ ಎಲ್ಲವು ಸರಿಯಿದ್ದರೆ ಶ್ರೀ ಮಲ್ಲನಾಥ್ ಪ್ರಸಾದ್ ಅವರ ತಡೆಹಿಡಿದಿರುವ ಯುಜಿಸಿ 7ನೇ ವೇತನ /ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡುವಂತೆ ಕೋರಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಶ್ರೀ ಮಲ್ಲನಾಥ್ ಪ್ರಸಾದ್ ಅವರಿಗೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಿದ್ದು, ಅದರಲ್ಲಿ ಶ್ರೀ ಮಲ್ಲನಾಥ್ ಪ್ರಸಾದ್ ಅವರನ್ನೇ ಸದಸ್ಯರನ್ನಾಗಿ ಮಾಡಿರುವುದು ತಪ್ಪಾಗಿರುತ್ತದೆ. ಜೊತೆಗೆ ಈ ಸಮಿತಿಯಲ್ಲಿ ಹಣಕಾಸು ವಿಭಾಗದವರನ್ನೇ ಸದಸ್ಯರನ್ನಾಗಿ ಮಾಡಿರುವುದು ಸಹ ತಪ್ಪಾಗಿದೆ. ನೀವು ನಡೆಸಿದಂತಹ ಸಭೆಯ ನಡಾವಳಿಯಲ್ಲಿ ಶ್ರೀ ಮಲ್ಲನಾಥ್ ಪ್ರಸಾದ್ ಅವರಿಗೆ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡಲು ಆದೇಶಿಸಿರುತ್ತೀರಿ, ಹೇಗೆ ಇದು ಸಾಧ್ಯ ಎಂದು ಪ್ರಶ್ನಿಸಿದರು. ಯಾವುದೇ ಸಮಿತಿಯನ್ನು ರಚಿಸುವಾಗ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ರಚನೆಯಾಗಬೇಕಾಗಿರುತ್ತದೆ. ಹಾಗೂ 78 ಕೋಟಿ ಹಣದ ಖರ್ಚು-ವೆಚ್ಚಗಳ ಬಗೆಗಿನ ಮಾಹಿತಿಯನ್ನು ಪೂರ್ಣ ಪ್ರಮಾಣದಲ್ಲಿ ನೀಡಿದ ನಂತರ ಅವರಿಗೆ ನೀಡುವಂತಹ ಸೌಲಭ್ಯವನ್ನು ನೀಡಬಹುದೆಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಶ್ರೀ ಮಲ್ಲನಾಥ್ ಪ್ರಸಾದ್ ಅವರು ನನ್ನ ಹತ್ತಿರ ಯಾವುದೇ ಡೇಟಾ ಇಲ್ಲವೆಂದು ತಿಳಿಸಿದ್ದಾರೆ ಎಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಯಾವುದೇ ನೌಕರರು ವಿಶ್ವವಿದ್ಯಾನಿಲಯದಿಂದ ನಿವೃತ್ತಿ ಹೊಂದಿದ ನಂತರ ತನ್ನ ವಿಭಾಗಕ್ಕೆ ಸಂಬಂಧಿಸಿದಂತಹ ಎಲ್ಲಾ ಮಾಹಿತಿಯನ್ನು ಮೊದಲು ನೀಡಬೇಕಾಗಿರುತ್ತದೆ ಎಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ಶ್ರೀ ಮಲ್ಲನಾಥ್ ಪ್ರಸಾದ್ ಅವರೇ ಸಾಫ್ಟ್‌ವೇರ ಅನ್ನು ಬಳಸುತ್ತಿದ್ದರು. ಸರ್ಕಾರವು ಮಾಹಿತಿಯನ್ನು ಕೋರಿದಾಗ ಮಾಹಿತಿಯನ್ನು ನೀಡಿರುತ್ತಾರೆ. ಆದರೆ ಪ್ರಸ್ತುತ ಅವರು ತನ್ನ ಬಳಿಯಲ್ಲಿ ಯಾವುದೇ ಮಾಹಿತಿ ಇರುವುದಿಲ್ಲಾ ಎಂದು ತಿಳಿಸಿರುತ್ತಾರೆ. ಹಾಗೂ ಸರ್ಕಾರಕ್ಕೆ ನೀಡಿದಂತಹ ಮಾಹಿತಿಯು |

| | |
|---|---|
| | ಸರಿಯಿದೆಯೇ ಇಲ್ಲವೇ ಎಂಬುದರ ಬಗೆಗಿನ ಮಾಹಿತಿಯೂ ಇಲ್ಲವೆಂದು ಹಾಗೂ ಎಲ್ಲ ಸಿಬ್ಬಂದಿಗಳಿಗೆ ನೀಡುವಂತಹ ಸೌಲಭ್ಯಗಳೆಲ್ಲವು ಹೆಚ್‌ಆರ್‌ಎಂಎಸ್‌ನಲ್ಲಿ ಇದ್ದು, ಯಾವುದೇ ಮಾಹಿತಿಯು ದೊರಕದಿದ್ದಾಗ ಖುದ್ದಾಗಿ ನಾನೇ ಬಂದು ನೋಡುವುದಾಗಿ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಶ್ರೀ ಮಲ್ಲಿನಾಥ್ ಪ್ರಸಾದ್ ಅವರು ಒಂದು ಸಾಫ್ಟ್‌ವೇರ್‌ಅನ್ನು ಸಿದ್ಧಪಡಿಸಿದ್ದರು. ಅದರ ಬಗ್ಗೆ ಯಾರಿಗೂ ಹೇಳಿಕೊಟ್ಟಿಲ್ಲ, ಜೊತೆಗೆ ಅವರಿಗೆ ವಹಿಸಿದಂತಹ ಕೆಲಸದ ಲೆಕ್ಕವನ್ನು ಸರಿಯಾಗಿ ವಿಶ್ವವಿದ್ಯಾನಿಲಯಕ್ಕೆ ನೀಡಬೇಕಾಗಿತ್ತು. ಆದರೆ ಲೆಕ್ಕ ಸರಿಯಾಗಿರುವುದಿಲ್ಲ. ಆದ್ದರಿಂದ ಅವರು ಲೆಕ್ಕವನ್ನು ಸರಿಯಾಗಿ ನೀಡಿದ್ದಲ್ಲಿ ಅವರಿಗೆ ಸೌಲಭ್ಯಗಳನ್ನು ನೀಡಬಹುದೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಶ್ರೀ ಮಲ್ಲಿನಾಥ್ ಪ್ರಸಾದ್ ಅವರಿಗೆ ನೀಡುವಂತಹ ಸೌಲಭ್ಯದ ಬಗೆಗೆ ಒಂದು ಸಮಿತಿಯನ್ನು ರಚಿಸಿ, ಸಭೆಯನ್ನು ನಡೆಸಿದ್ದೀರಿ, ಆದರೆ ಈ ಸಭೆಯಿಂದ ಆದಂತಹ ಉಪಯೋಗವೇನು ಎಂದು ಹಣಕಾಸು ಅಧಿಕಾರಿಗಳಿಗೆ ಪ್ರಶ್ನಿಸಿದರು. ಜೊತೆಗೆ ಅವರ ನಿವೃತ್ತಿಯಾದ ಸಂದರ್ಭದಲ್ಲಿ ಅವರಲ್ಲಿದ್ದ ಡಿಜಿಟಲ್ ಕೀ ಆಗಿರಬಹುದು ಅಥವಾ ಇನ್ನ್ಯಾವುದೇ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ನೀಡಬೇಕಾಗಿತ್ತು ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ವಿಶ್ವವಿದ್ಯಾನಿಲಯವು ನಡೆಸಿದಂತಹ ಸಭೆಯ ನಡಾವಳಿಯಲ್ಲಿ ದಾಖಲಿಸಿರುವುದರಿಂದ ಇದು ಕಾನೂನಾತ್ಮಕವಾಗಿರುತ್ತದೆ. ಜೊತೆಗೆ ನೀವು ಆದೇಶವನ್ನೇ ನೀಡಿದಂತಾಗುತ್ತದೆ. ಇದರಿಂದ ಅವರು ಕೋರ್ಟ್‌ಗೆ ಹೋಗುವ ಸಂಭವವಿರುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ನೀವು ಅಧ್ಯಕ್ಷತೆ ವಹಿಸಿ ನಡೆಸಿದಂತಹ ಸಭೆಯಲ್ಲಿ ನಡಾವಳಿಯನ್ನು ದಾಖಲಿಸಿ ಕುಲಪತಿಗಳಿಗೆ ಅಥವಾ ಸಿಂಡಿಕೇಟ್‌ನ ಗಮನಕ್ಕೆ ತರಬೇಕು. ಆದೇಶ ಮಾಡುವಂತಿಲ್ಲವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಈ ವಿಷಯದ ಬಗ್ಗೆ ಯಾವ ರೀತಿಯ ತೀರ್ಮಾನ ತೆಗೆದುಕೊಳ್ಳುವುದು ಎಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ ಶ್ರೀ ಮಲ್ಲಿನಾಥ್ ಪ್ರಸಾದ್ ಅವರು ನಿವೃತ್ತಿ ಹೊಂದಿ ಮೂರು ವರ್ಷಗಳು ತುಂಬಿದೆ. ಆದರೆ ಇಲ್ಲಿಯವರೆಗೂ ಮಾಹಿತಿಯನ್ನು ನೀಡಿರುವುದಿಲ್ಲ. 78 ಕೋಟಿಗೆ ಸಂಬಂಧಿಸಿದಂತಹ ಲೆಕ್ಕವನ್ನು ವ್ಯವಸ್ಥಿತವಾಗಿ ಸರಿಯಾದ ರೀತಿಯಲ್ಲಿ ನೀಡಿದ ನಂತರ ಅವರಿಗೆ ಸೌಲಭ್ಯಗಳನ್ನು ನೀಡಬಹುದೆಂದು ತಿಳಿಸಿದರು. |
| ತೀರ್ಮಾನ | ಶ್ರೀ ಮಲ್ಲಿನಾಥ್ ಪ್ರಸಾದ್, ನಿವೃತ್ತ ಪ್ರೋಗ್ರಾಮರ್, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ರೂ. 78 ಕೋಟಿಗೆ ಸಂಬಂಧಿಸಿದ ಲೆಕ್ಕವನ್ನು ವಿಶ್ವವಿದ್ಯಾನಿಲಯಕ್ಕೆ ನೀಡಿದ ನಂತರ ನಿವೃತ್ತಿ ಸೌಲಭ್ಯಗಳನ್ನು ನೀಡಬಹುದೆಂದು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/6.19 | ಡಾ. ಜಿ.ಸುಬ್ರಹ್ಮಣ್ಯ, ನಿವೃತ್ತ ಪ್ರಾಧ್ಯಾಪಕರು ಇವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ದ ಪ್ರಕರಣ 53(10) ರನ್ವಯ ಹಾಗೂ ವಿಭಾಗಾಧ್ಯಕ್ಷರ ಶಿಫಾರಸ್ಸನ್ನು ಪರಿಗಣಿಸಿ ಡಾ. ಜಿ.ಸುಬ್ರಮಣ್ಯ ಇವರನ್ನು ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ದಿನಾಂಕ: 10-08-2023 ರಿಂದ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2023/6.20 | ಡಾ. ಬಿ.ಹೆಚ್. ಸುರೇಶ್, ನಿವೃತ್ತ ಪ್ರಾಧ್ಯಾಪಕರು ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ದ ಪ್ರಕರಣ 53(10) ರನ್ವಯ ಡಾ. ಬಿ.ಹೆಚ್. ಸುರೇಶ್, ನಿವೃತ್ತ ಪ್ರಾಧ್ಯಾಪಕರು ಇವರನ್ನು 2023-24ನೇ ಸಾಲಿಗೆ ಅನ್ವಯವಾಗುವಂತೆ ಒಂದು ವರ್ಷದ ಅವಧಿಗೆ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/6.21 | ಪರೀಕ್ಷಾ ಕಾರ್ಯಗಳ ಸಂಬಂಧ ಸರ್ಕಾರ ನಿಗದಿಪಡಿಸಿರುವ ಸಂಭಾವನೆ ಹಾಗೂ ಭತ್ಯೆಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾ ಕಾರ್ಯಗಳ ಸಂಬಂಧ ಸರ್ಕಾರವು ನಿಗದಿಪಡಿಸಿರುವ ಏಕರೂಪ ಸಂಭಾವನೆ ಹಾಗೂ ಭತ್ಯೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2023/6.22 | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ನಿರ್ದೇಶಕರ ನೇಮಕಾತಿಯ ಬಗೆಗೆ. |
| ತೀರ್ಮಾನ | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನ ನಿರ್ದೇಶಕರ ನೇಮಕಾತಿಯನ್ನು ಸೇವಾ ಹಿರಿತನ ಆಧಾರದ ಮೇಲೆ ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/6.23 | ಪ್ರೊ. ಟಿ. ಅನಂತಪದ್ಮನಾಭ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ನಿರ್ದೇಶಕರಾಗಿ ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಪ್ರೊ. ಟಿ. ಅನಂತಪದ್ಮನಾಭ, ವಿಶ್ರಾಂತ ಪ್ರಾಂಶುಪಾಲರು, ಎನ್.ಐ.ಇ. ಕಾಲೇಜು, ಮೈಸೂರು ಇವರನ್ನು ಮೈಸೂರು ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಇಂಜಿನಿಯರಿಂಗ್, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ನಿರ್ದೇಶಕರನ್ನಾಗಿ ದಿನಾಂಕ 19.08.2023 ರಿಂದ ಜಾರಿಗೆ ಬಂದಂತೆ ಒಂದು ವರ್ಷದ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ಅನುಮತಿಸಿತು. |
| ಸಾಮಾನ್ಯ ಸಭೆ 2023/6.24 | ಅತಿಥಿ ಉಪನ್ಯಾಸಕರುಗಳನ್ನು ಆಹ್ವಾನಿಸಿರುವ ಬಗ್ಗೆ. |
| ತೀರ್ಮಾನ | ಮಹಾರಾಜ ಕಾಲೇಜಿನಲ್ಲಿ ರಾಜ್ಯಶಾಸ್ತ್ರ, ಭಾರತ ಮತ್ತು ಭಾರತೀಯ ಸಂವಿಧಾನ ವಿಷಯಗಳ ಅತಿಥಿ ಉಪನ್ಯಾಸಕರ ನೇಮಕಾತಿ ಸಂಬಂಧ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ವಿಷಯಗಳಿಗೆ ಅತಿಥಿ ಉಪನ್ಯಾಸಕರುಗಳನ್ನು 2022-23ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸುವಂತೆ ಆಹ್ವಾನಿಸಿರುವ ಸಂಬಂಧ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/6.25 | ವಿಶೇಷ ದಂಡಶುಲ್ಕಗಳನ್ನು ಪರಿಷ್ಕರಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಕೆಲವು ಸಂಶೋಧಕರು ಕಾರಣಾಂತರಗಳಿಂದ ನಿಗಧಿತ ವೇಳೆಯಲ್ಲಿ ಸಂಶೋಧನಾ ಕಾರ್ಯದ ಪ್ರಗತಿ ವರದಿ ಮತ್ತು ಶುಲ್ಕವನ್ನು ಸಲ್ಲಿಸದೇ ಸಂಶೋಧನಾ ಕಾರ್ಯವನ್ನು ಮುಂದುವರೆಸಲು ಅನುಮತಿ ಕೋರುವಂತಹ |

| | |
|---|---|
| | ಅಭ್ಯರ್ಥಿಗಳಿಗೆ ವಿಳಂಬ ಮನ್ನಾ ಮಾಡಿ ಅನುಮತಿ ನೀಡುವ ಸಂಬಂಧ ವಿಶ್ವವಿದ್ಯಾನಿಲಯವು ಪರಿಷ್ಕರಿಸಿರುವ ವಿಶೇಷ ದಂಡಶುಲ್ಕವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/6.26 | ವಿಶ್ವವಿದ್ಯಾನಿಲಯದಲ್ಲಿ "ಆಲತ್ತೂರು ಕಾಳಮ್ಮ ಗೌಡಿಕೆ ಲಿಂಗೇಗೌಡ ಸ್ಮರಣಾರ್ಥ ಚಿನ್ನದ ಪದಕ" ಎರಡು ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರ ಪ್ರಕರಣ 29(2) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ಈ ಕೆಳಕಂಡಂತೆ ನಮೂದಿಸಿರುವ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕಗಳನ್ನು ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| ಕ್ರ. ಸಂ. | ದಾನಿಗಳು ಕೋರಿರುವ ದತ್ತಿಯ ಹೆಸರು | ಷರತ್ತುಗಳು | ಮೊತ್ತ |
|---|---|---|---|
| 1 | "ಆಲತ್ತೂರು ಕಾಳಮ್ಮ ಗೌಡಿಕೆಲಿಂಗೇಗೌಡ ಸ್ಮರಣಾರ್ಥ ಚಿನ್ನದ ಪದಕ | M.Sc in **Physics** in First Attempt and Securing Highest Marks | 1,00,000/- |
| 2 | "ಆಲತ್ತೂರು ಕಾಳಮ್ಮ ಗೌಡಿಕೆಲಿಂಗೇಗೌಡ ಸ್ಮರಣಾರ್ಥ ಚಿನ್ನದ ಪದಕ | M.Sc in **Botany** in First Attempt and Securing Highest Marks | 1,00,000/- |

| | |
|---|---|
| ಸಾಮಾನ್ಯ ಸಭೆ 2023/6.27 | "ಪ್ರೊ. ಎ.ಎಸ್. ಕಾಳೇಗೌಡ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರನ್ವಯ ಪ್ರಕರಣ 29 (2) (r) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು M.A in Kannada ಪದವಿ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ "ಪ್ರೊ. ಎ.ಎಸ್. ಕಾಳೇಗೌಡ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/6.28 | "ಪ್ರೊ. ಶೋಭಾ ಜಗನ್ನಾಥ್ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರನ್ವಯ ಪ್ರಕರಣ 29 (2) (r) ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು M.Sc. in Botany ಪದವಿ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ "ಪ್ರೊ. ಶೋಭಾ ಜಗನ್ನಾಥ್ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2023/6.29 | Payment of professional fees in favour of Sri Santosh S. Nagarale, Advocate, Bengaluru and M/S. Holla & Holla, Advocates, Bengaluru towards representing the Hon'ble Chancellor in W.P. No. 9068/2023 & Connected matters and W.A. No. 837/2023 & connected matters before the Hon'ble High Court of Karnataka at Bengaluru-reg. |
| ತೀರ್ಮಾನ | APPROVED |
| ಸಾಮಾನ್ಯ ಸಭೆ 2023/6.30 | 2006-07ನೇ ಸಾಲಿನಲ್ಲಿ ನಡೆದ ಬೋಧಕರ ನೇಮಕಾತಿಯ ನಿಯಮಾವಳಿಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ನಿರ್ದೇಶಿಸಿರುವ ಅನ್ವಯ ಕ್ರಮವಹಿಸುವ ಕುರಿತು. |
| | ಕುಲಪತಿಗಳು ಮಾತನಾಡಿ, 2006-07ನೇ ಸಾಲಿನಲ್ಲಿ ನಡೆದ ಬೋಧಕರ ನೇಮಕಾತಿಯ ನಿಯಮಾವಳಿಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಡಾ.ರಾಮೇಗೌಡ, ಅಧ್ಯಕ್ಷರು ಇವರ ಸಮಿತಿಯು ನೀಡಿರುವ ವರದಿಯನುಸಾರ ಘನತೆವೆತ್ತ ರಾಜ್ಯಪಾಲರು ನೀಡಿರುವ ನಿರ್ದೇಶನಗಳನ್ವಯ ಕ್ರಮ ಸಂಖ್ಯೆ: 01 ರಿಂದ 05 ರಲ್ಲಿ ಸೂಚಿಸಿರುವ ಅಂಶಗಳನ್ನು ಕ್ರಮವಹಿಸಬೇಕೆಂದು ನಿರ್ದೇಶಿಸಿರುತ್ತಾರೆ. ಇದರಲ್ಲಿ ಕ್ರಮ ಸಂಖ್ಯೆ: 01 ರಿಂದ 05 ರಲ್ಲಿ ಸೂಚಿಸಿರುವ ಅಂಶಗಳನ್ನು ಅನುಸರಿಸಲಾಗುವುದು ಹಾಗೂ ಕ್ರಮ ಸಂಖ್ಯೆ: 05 ರಲ್ಲಿ ಬೋಧಕರ ನೇಮಕಾತಿಯ 2006-07ನೇ ಅವಧಿಯಲ್ಲಿದ್ದ ಕುಲಪತಿ, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ನಿರ್ದೇಶಿಸಿರುತ್ತಾರೆ.<br><br>2006-07 ನೇ ಅವಧಿಯಲ್ಲಿ ಐ.ಎಫ್.ಎಸ್ ಅಧಿಕಾರಿಯನ್ನು ಕುಲಸಚಿವರಾಗಿ, ಕೆ.ಎಸ್.ಎ.ಎಸ್ ಅಧಿಕಾರಿಯನ್ನು ಹಣಕಾಸು ಅಧಿಕಾರಿಯಾಗಿ ಸರ್ಕಾರದಿಂದ ನೇಮಕ ಮಾಡಲಾಗಿರುತ್ತದೆ. ಹಾಗೆಯೇ, ಘನತೆವೆತ್ತ ರಾಜ್ಯಪಾಲರು ಕುಲಪತಿಯವರನ್ನು ನೇಮಕ ಮಾಡಿರುವ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಅಧಿಕಾರ ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿರುವುದಿಲ್ಲ. ಇದರಿಂದ ಕುಲಪತಿಯವರಿಗೆ ಘನತೆವೆತ್ತ ರಾಜ್ಯಪಾಲರು, ಕುಲಸಚಿವರ ಮತ್ತು ಹಣಕಾಸು ಅಧಿಕಾರಿಯವರ ವಿರುದ್ಧ ಸರ್ಕಾರವು ಶಿಸ್ತು ಕ್ರಮ ಜರುಗಿಸಬೇಕಾಗಿರುವುದರಿಂದ ಈ ಸಂಬಂಧ ಸರ್ಕಾರಕ್ಕೆ ಹಾಗೂ ಘನತೆವೆತ್ತ ರಾಜ್ಯಪಾಲರಿಗೆ ಪತ್ರ ಬರೆಯಲಾಗುವುದೆಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | 2006-07ನೇ ಸಾಲಿನಲ್ಲಿ ನಡೆದ ಬೋಧಕರ ನೇಮಕಾತಿಯ ನಿಯಮಾವಳಿಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಶ್ರೀ ರಾಮೇಗೌಡ, ಅಧ್ಯಕ್ಷರು ಇವರ ಸಮಿತಿಯು ನೀಡಿರುವ ವರದಿಯನುಸಾರ ಘನತೆವೆತ್ತ ರಾಜ್ಯಪಾಲರು ನೀಡಿರುವ ನಿರ್ದೇಶನಗಳನ್ವಯ ಕ್ರಮ ಸಂಖ್ಯೆ: 01 ರಿಂದ 05 ರಲ್ಲಿ ಸೂಚಿಸಿರುವ ಅಂಶಗಳ ಬಗ್ಗೆ ಕ್ರಮವಹಿಸಬೇಕೆಂದು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ, ಕ್ರಮ ಸಂಖ್ಯೆ: 01 ರಿಂದ 04 ರವರೆಗೆ ಕ್ರಮವಹಿಸಲು ಒಪ್ಪಿಗೆಯನ್ನು ನೀಡಿದ್ದ ಸಿಂಡಿಕೇಟ್ ಸಭೆಯು ಕ್ರಮ ಸಂಖ್ಯೆ 05 ಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ದೇಶನ ಕೋರಿ ರಾಜ್ಯ ಸರ್ಕಾರ ಮತ್ತು ಘನತೆವೆತ್ತ ರಾಜ್ಯಪಾಲರಿಗೆ ಪತ್ರ ಬರೆಯಲು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/6.31 | Centre for Study of Social Exclusive and Inclusive Policy (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ಮುಂದುವರೆಸುವ ಬಗ್ಗೆ. |
| ತೀರ್ಮಾನ | ಯುಜಿಸಿಯವರು ದಿನಾಂಕ 28.4.2023 ರಂದು ಹೊರಡಿಸಿರುವ ನೋಟಿಸ್‌ನ ಅನುಸಾರ ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ರೀತಿಯ ಆರ್ಥಿಕ ಹೊರೆ ಇಲ್ಲದಂತೆ Centre for Study of Social Exclusive and Inclusive Policy (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ದಿನಾಂಕ: 31.03.2024ರವರೆಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2023/6.32 | ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅನುಸಾರ Regulations Governing the Choice Based Credit System Semester Scheme with Multiple Entry and Exit Options in the Undergraduate and Post-graduate Degree Programs ನ ಕರಡು ವಿನಿಯಮಾವಳಿಯ ಬಗ್ಗೆ. |
| ತೀರ್ಮಾನ | ರಾಷ್ಟ್ರೀಯ ಶಿಕ್ಷಣ ನೀತಿ 2020 (NEP) ಅನುಸಾರ Regulations Governing the Choice Based Credit System Semester Scheme with Multiple Entry and Exit Options in the Undergraduate and Post-graduate Degree Programs ನ ಕರಡು ವಿನಿಯಮಾವಳಿಯನ್ನು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿ ಕೊಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/6.33 | ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ತಾಂತ್ರಿಕ ಕಾಲೇಜು, ಮಾನಸಗಂಗೋತ್ರಿ, ಮೈಸೂರು ಇವರು ಪ್ರಸ್ತುತ ಬ್ಯಾಂಕ್‌ನಲ್ಲಿ ಹೊಂದಿರುವ ಖಾತೆಯ ಜೊತೆಗೆ ಮತ್ತೊಂದು ಹೆಚ್ಚುವರಿ ಖಾತೆಯನ್ನು ತೆರೆಯಲು ಅನುಮತಿ ನೀಡಿರುವ ವಿಷಯವನ್ನು ಅನುಸಮರ್ಥಿಸುವ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು. |
| ಸಾಮಾನ್ಯ ಸಭೆ 2023/6.34 | ದಿನಸಿ ಮತ್ತು ಆಹಾರ ಪದಾರ್ಥಗಳ ದರಗಳನ್ನು ಪರಿಷ್ಕರಿಸಿ ಮುಂದುವರೆಸಿರುವ, ಅಡುಗೆ ಸಿಬ್ಬಂದಿಗಳ ಟೆಂಡರ್‌ನ್ನು ತಾತ್ಕಾಲಿಕವಾಗಿ ಮುಂದುವರೆಸಿರುವ ಹಾಗೂ 2023 ಆಗಸ್ಟ್ ಮಾಹೆಯಲ್ಲಿ ವಿದ್ಯಾರ್ಥಿನಿಲಯಗಳಿಗೆ ದಿನಸಿ ಪದಾರ್ಥಗಳನ್ನು ಖರೀದಿಸಿರುವ ಸಂಬಂಧ ಸಮಿತಿಯು ಸಲ್ಲಿಸಿರುವ ವರದಿ ಬಗೆಗೆ. |
| ತೀರ್ಮಾನ | ದಿನಸಿ ಮತ್ತು ಆಹಾರ ಪದಾರ್ಥಗಳ ದರಗಳನ್ನು ಪರಿಷ್ಕರಿಸಿ ಮುಂದುವರೆಸಿರುವ, ಅಡುಗೆ ಸಿಬ್ಬಂದಿಗಳ ಟೆಂಡರ್‌ನ್ನು ತಾತ್ಕಾಲಿಕವಾಗಿ ಮುಂದುವರೆಸಿರುವ ಹಾಗೂ 2023 ಆಗಸ್ಟ್ ಮಾಹೆಯಲ್ಲಿ ವಿದ್ಯಾರ್ಥಿನಿಲಯಗಳಿಗೆ ದಿನಸಿ ಪದಾರ್ಥಗಳನ್ನು ಖರೀದಿಸಿರುವ ಸಂಬಂಧ ದಿನಾಂಕ: 15-12-2023 ರಂದು ನಡೆದ ಸಮಿತಿ ಸಭೆಯ ನಡವಳಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2023/6.35 | ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಮತ್ತು ಮಿಥಿಕ್ ಸೊಸೈಟಿ, ಬೆಂಗಳೂರು ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| ತೀರ್ಮಾನ | ಮಿಥಿಕ್ ಸೊಸೈಟಿ, ಬೆಂಗಳೂರು ಸಂಸ್ಥೆಯೊಡನೆ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು "ಟಿ.ನರಸೀಪುರ, ಬೊಮ್ಮನಹಳ್ಳಿ (ಟಿ.ನರಸೀಪುರ ತಾಲೂಕು, ಮೈಸೂರು ಜಿಲ್ಲೆ) ಮತ್ತು ದೊಡ್ಡ ಅಲತ್ತೂರು (ಹನೂರು ತಾಲೂಕು, ಚಾಮರಾಜನಗರ ಜಿಲ್ಲೆ) ನೆಲೆಗಳ ಪುರಾತತ್ವ ಉತ್ಖನನ"ದ ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆಗೆ ಒಳಪಡಲು ಕೋರಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

**ಇತರೆ ವಿಷಯಗಳು:**

ಮಾನ್ಯ ಕುಲಪತಿಯವರು ಮಾತನಾಡಿ, ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸದ ಕಟ್ಟಡವು ಶಿಥಿಲಗೊಂಡಿದ್ದು, ಅದರಲ್ಲಿನ ಜಾನಪದ ಮ್ಯೂಸಿಯಂ ತುಂಬಾ ಚೆನ್ನಾಗಿದೆ. ಅಮೇರಿಕಾದ ಯುಎಸ್ ಕನ್ಸೊಲೇಟ್‌ನವರು ರೂ. 2.4 ಕೋಟಿಯ ಮೊತ್ತದ AFCP ಪ್ರಾಜೆಕ್ಟ್‌ನಡಿಯಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನು ಮಾತ್ರ ನವೀಕರಣಮಾಡಲು ಮುಂದೆ ಬಂದಿದ್ದಾರೆ ಹಾಗೂ ಈ ಸಂಬಂಧ ವಿಶ್ವವಿದ್ಯಾನಿಲಯದ ವತಿಯಿಂದ ಒಡಂಬಡಿಕೆ (MOU) ಮಾಡಿಕೊಳ್ಳಲಾಗಿದೆ. ಕಾರಣಾಂತರಗಳಿಂದ

ದುರಸ್ಥಿಕಾರ್ಯವು ನಿಧಾನಗತಿಯಲ್ಲಿ ಸಾಗುತ್ತಾ ಇದೆ. ಜನವರಿ 4, 2024 ರಂದು Consul General, Consulate General of United States of America in Chennai ಅವರು ವಿಶ್ವವಿದ್ಯಾನಿಲಯಕ್ಕೆ ಬರಲಿರುವುದರಿಂದ ಅಂದು ಒಂದು ಪ್ರೆಸ್ ಮೀಟ್ ಮಾಡಲಿದ್ದು, ಈ ಪ್ರೆಸ್‌ಮೀಟ್‌ನಲ್ಲಿ ಜಾನಪದ ವಸ್ತುಸಂಗ್ರಹಾಲಯದ ನವೀಕರಣದ ಬಗ್ಗೆ ಮಾಹಿತಿ ನೀಡಲಿದ್ದಾರೆ ಎಂಬ ಅಂಶವನ್ನು ಸಭೆಗೆ ತಿಳಿಸಿದರು ಹಾಗೂ ಸಿಂಡಿಕೇಟ್ ಸದಸ್ಯರುಗಳಾದ ತಾವುಗಳು ಈ ಪ್ರೆಸ್‌ಮೀಟ್‌ನಲ್ಲಿ ಭಾಗವಹಿಸಿ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಜಯಲಕ್ಷ್ಮಿ ವಿಲಾಸದ ಜಾನಪದ ವಸ್ತುಸಂಗ್ರಹಾಲಯದ ಕೆಲಸ ನಿರ್ವಹಿಸುತ್ತಿರುವುದರಲ್ಲಿ ಲೋಪದೋಷಗಳಿವೆ ಎಂಬ ಪತ್ರವನ್ನು ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್.ಚಂದ್ರಶೇಖರ್ ಅವರು ಮಾತನಾಡಿ, ಈಗ ನೀಡಿರುವ ಅನುದಾನವು ಪೂರ್ಣ ಖರ್ಚಾಗುತ್ತದೆಯೇ ಅಥವಾ ಉಳಿಯುತ್ತದೆಯೇ ಹಾಗೂ ಈ ಯೋಜನೆ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಹಿಡಿತವಿರುವುದಿಲ್ಲವೇ ಎಂಬ ಅಂಶಗಳ ಬಗ್ಗೆ ಮಾಹಿತಿ ಕೋರಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಯು.ಎಸ್. ಕನ್ಸೊಲೇಟ್‌ರವರಿಂದ ಬಂದಂತಹ ಅನುದಾನವನ್ನು ವಿಶ್ವವಿದ್ಯಾನಿಲಯದಿಂದ ಡೆಕ್ಕನ್ ಸಂಸ್ಥೆಗೆ ವರ್ಗಾಯಿಸಲಾಗುವುದೆಂದು ಮಾಹಿತಿ ನೀಡಿದರು.

ಮಾನ್ಯ ಕುಲಪತಿಯವರು ಮಾತನಾಡಿ ಪ್ರಸ್ತುತ ನವೀಕರಣದಲ್ಲಿ ನಿರತರಾಗಿರುವ ಸದಸ್ಯರಲ್ಲಿ ಐಐಟಿ ಇಂಜಿನಿಯರ್‌ಗಳು, ನುರಿತ ತಜ್ಞರು, ಡೆಕ್ಕನ್ ಹೆರಿಟೇಜ್‌ನವರು ಇದ್ದಾರೆ ಹಾಗೆಯೇ ಮೈಸೂರಿನ ಪ್ರಖ್ಯಾತ ದೊಡ್ಡಗಡಿಯಾರ, ಅರಮನೆಯ ಕೆಲವು ಪಾರಂಪರಿಕ ಕಟ್ಟಡದ ದುರಸ್ತಿ ಕೆಲಸ ಹಾಗೂ ಇನ್ನಿತರೆ ಕೆಲಸಗಳನ್ನು ನಿರ್ವಹಿಸುತ್ತಿರುವ ಡೆಕ್ಕನ್ ಹೆರಿಟೇಜ್‌ನವರು ಎಂದು ಹಾಗೂ ಇದರಲ್ಲಿ ಸ್ಥಳೀಯ ಇಂಜಿನಿಯರ್‌ಗಳು ಹಾಗೂ ನಮ್ಮ ವಿಶ್ವವಿದ್ಯಾನಿಲಯದ ಪಾತ್ರವೇನು ಇಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಈ ಕಟ್ಟಡವು ಪಾರಂಪರಿಕ ಕಟ್ಟಡವಾಗಿರುವುದರಿಂದ ಯಥಾಸ್ಥಿತಿಯಲ್ಲಿ ಪುರಾತತ್ವ ಮತ್ತು ಪಾರಂಪರಿಕ ಕಟ್ಟಡಗಳ ಮಾರ್ಗಸೂಚಿಯಂತೆ ಸಂಪೂರ್ಣವಾಗಿ ದುರಸ್ಥಿ ಮಾಡಿ ಪುನರ್‌ಸ್ಥಾಪಿಸಲು ರೂ. 30.00 ಕೋಟಿಗಳ ಅನುದಾನ ಅಗತ್ಯವಿರುತ್ತದೆ. ಆದರೆ ಇದರಲ್ಲಿನ ಜಾನಪದ ಮ್ಯೂಸಿಯಂ ತುಂಬಾ ಚೆನ್ನಾಗಿರುವುದರಿಂದ ಅಮೇರಿಕಾದಲ್ಲಿ ನೆಲೆಸಿರುವ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿರುವ ಹಿರಿಯ ವಿದ್ಯಾರ್ಥಿಯೋರ್ವರು ಜಯಲಕ್ಷ್ಮಿ ವಿಲಾಸ ಕಟ್ಟಡ ನವೀಕರಿಸಲು ಮುಂದೆ ಬಂದಿರುವುದಾಗಿ ಕೇವಲ ಮೌಖಿಕವಾಗಿ ತಿಳಿಸಿದ್ದಾರೆ. ಈ ಬಗ್ಗೆ ಒಡಂಬಡಿಕೆಯಾದಲ್ಲಿ ಅವರೇ ಖುದ್ದಾಗಿ ಕಾರ್ಯನಿರ್ವಹಿಸುವುದರಿಂದ ನಮ್ಮ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲವೆಂದು ಹಾಗೂ ಹಣಕಾಸಿನ ನಿರ್ವಹಣೆಯ ಜವಾಬ್ದಾರಿಯು ಇರುವುದಿಲ್ಲವೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ನವೆಂಬರ್ ಮಾಹೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುವುದು ವಾಡಿಕೆ. ಆದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುವುದಿಲ್ಲವೇ? ನಮಗೆ ಇದುವರೆಗೂ ಆಹ್ವಾನ ಪತ್ರಿಕೆಯು ಬಂದಿರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ನಮ್ಮಲ್ಲಿ ಕೆಲವು ಜಯಂತಿಗಳನ್ನು, ನಾಡಹಬ್ಬ ಹಾಗೂ ರಾಷ್ಟ್ರೀಯ ಹಬ್ಬಗಳನ್ನು ಕೆಲವೊಂದು ವಿಭಾಗದವರೇ ಆಚರಿಸಿಕೊಂಡು ಬರುತ್ತಿದ್ದಾರೆ. ಅದರಲ್ಲಿ ಜನವರಿ 26ರ ಗಣರಾಜ್ಯೋತ್ಸವ ಹಾಗೂ ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯನ್ನು ಕ್ರಾಫರ್ಡ್ ಭವನದಲ್ಲಿಯು ಹಾಗೂ ವಾಲ್ಮೀಕಿ ಜಯಂತಿ, ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಇನ್ನಿತರೆ ಜಯಂತಿಗಳನ್ನು ಆಯಾಯ ವಿಭಾಗಕ್ಕೆ ಸಂಬಂಧಿಸಿದವರು ಮಾಡಿಕೊಂಡು ಬರುವುದು ವಾಡಿಕೆಯಾಗಿದೆ. ಅದೇ ರೀತಿ ಕನ್ನಡ ರಾಜ್ಯೋತ್ಸವವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಆಚರಿಸಿಕೊಂಡು ಬಂದಿರುತ್ತಾರೆ. ಆದರೆ ಅವರು ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸುವುದಿಲ್ಲ, ನವೆಂಬರ್ ಮಾಹೆಯಲ್ಲಿ ಯಾವುದಾದರೂ ದಿನಾಂಕದಂದು ಆಚರಿಸಿಕೊಂಡು ಬರುತ್ತಿದ್ದಾರೆ. ಆದ್ದರಿಂದ ಮುಂದೆ ಕ್ರಾಫರ್ಡ್ ಭವನ ಅಥವಾ

ಮಾನಸಗಂಗೋತ್ರಿಯಲ್ಲಿ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ ಶ್ರೀ ಪ್ರವೀಣ್ ಕುಮಾರ್ ಮೆಲ್ಲಹಳ್ಳಿ, ಅತಿಥಿ ಉಪನ್ಯಾಸಕರು, ಸಾರ್ವಜನಿಕ ಆಡಳಿತ, ಇವರನ್ನು ಬಿಡುಗಡೆಗೊಳಿಸಬಾರದೆಂದು ಉಚ್ಚನ್ಯಾಯಾಲಯದಿಂದ ಆದೇಶ ಬಂದಿರುವುದಾಗಿ ಸಭೆಗೆ ತಿಳಿಸಿದರು.

ಕುಲಸಚಿವರು ಮಾತನಾಡಿ ಉಚ್ಛ ನ್ಯಾಯಲಯದ ಆದೇಶದ ಅನ್ವಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿನ ಡಾ. ಮೀರ ಅವರ ಮೇಲೆ ಸಾಕಷ್ಟು ದೂರುಗಳು ಬಂದಿವೆ. ಡಾ. ಮೀರ ಅವರು ತರಗತಿಯಲ್ಲಿ ಪಾಠವನ್ನು ತೆಗೆದುಕೊಳ್ಳದೆ ಇರುವುದು, ಆ ಸಂಸ್ಥೆಗೆ ನಿಯಮಿತವಾಗಿ ಹಾಜರಾಗದಿರುವುದು, ಜೊತೆಗೆ ಅವರು ತೆಗೆದುಕೊಳ್ಳುವಂತಹ ವೇತನಕ್ಕಾದರೂ ಸರಿಯಾದ ರೀತಿಯಲ್ಲಿ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಜೊತೆಗೆ ವಿದ್ಯಾರ್ಥಿ, ಸಿಬ್ಬಂದಿಗಳ ಜೊತೆ ಅನುಚಿತವಾಗಿ ವರ್ತಿಸುವುದು ಜೊತೆಗೆ, ವಿಭಾಗಕ್ಕೆ ಬರದೆ ಇರುವುದು ಸರಿಯಾದ ಕ್ರಮವಲ್ಲ. ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಡಾ. ಮೀರ ಅವರ ಮೇಲೆ ವಿದ್ಯಾರ್ಥಿಗಳು ಸಂಶೋಧನ ವಿದ್ಯಾರ್ಥಿಗಳು, ಅತಿಥಿ ಉಪನ್ಯಾಸಕರು ಮತ್ತು ಬೋಧಕೇತರರ ಸಿಬ್ಬಂದಿಯವರಿಂದ ಬಂದಿರುವಂತಹ ದೂರನ್ನು ಕೇಳಿ ಮಾನಸಗಂಗೋತ್ರಿಯಲ್ಲಿ ಇಂಥಾ ಸಮಸ್ಯೆಗಳು ಇರುವುದು ಆಶ್ಚರ್ಯವಾಗಿದೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ ಎಲ್ಲಾ ವಿಭಾಗಗಳ ತೊಂದರೆ ಏನಂದರೆ ವಿದ್ಯಾರ್ಥಿಗಳ ಪ್ರವೇಶಾತಿ ಕುಂಠಿತವಾಗುತ್ತಾ ಇದೆ ಎಂದು. ಮೈಸೂರಿನಲ್ಲಿರುವ ಬೇರೆ ಶಿಕ್ಷಣ ಸಂಸ್ಥೆಗಳು ಹಲವಾರು ರೀತಿಯ ಜಾಹೀರಾತನ್ನು ನೀಡಿ ವಿದ್ಯಾರ್ಥಿಗಳನ್ನು ತಮ್ಮೆಡೆಗೆ ಸೆಳೆಯುತ್ತಿದ್ದಾರೆ. ಇದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಕಡಿಮೆ ಆಗುತ್ತಾ ಇದೆ. ನಮ್ಮ ಆವರಣದಲ್ಲೇ ಸಾಧ್ಯವಾದಷ್ಟು ಜಾಹಿರಾತು ಫಲಕಗಳನ್ನು ಹಾಕಬಹುದು. ಬೇರೆ ವಿದ್ಯಾ ಸಂಸ್ಥೆಗಳು ಸಾವಿರಾರು ಹಣ ಕೊಟ್ಟು ಜಾಹಿರಾತನ್ನು ನೀಡುತ್ತಿದ್ದಾರೆ. ನಾವು ಮುಖ್ಯವಾದ ರಸ್ತೆಗಳಲ್ಲಿ, ಗಂಗೋತ್ರಿಯ ಆವರಣದಲ್ಲಿ ಕೆಲವೊಂದು ಸೂಕ್ಷ್ಮವಾದಂತಹ ಪ್ರದೇಶದಲ್ಲಿ specialized course ಹಾಗೂ ಸ್ಪರ್ಧಾತ್ಮಕ ಕೋರ್ಸ್‌ಗಳ ಜಾಹಿರಾತು ಫಲಕವನ್ನು ಹಾಕಿದರೆ ಸಾರ್ವಜನಿಕರಾಗಲಿ ಅಥವಾ ವಿದ್ಯಾರ್ಥಿಗಳಾಗಲಿ ಇಂಥ ಕೋರ್ಸ್‌ಗಳು ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿದೆ ಎಂದು ಮನಗಂಡು ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ ಐ.ಸಿ.ಡಿ ವಿಭಾಗದಿಂದ ದೊಡ್ಡ ಪರದೆಗಳಲ್ಲಿ ಜಾಹಿರಾತನ್ನು ನೀಡುತ್ತಿದ್ದೆವು. ಆದರೆ ಎಲ್ಇಡಿಗಳು ದುರಸ್ತಿಯಿರುವುದರಿಂದ ಪ್ರಸ್ತುತ ಸ್ಥಗಿತಗೊಂಡಿದೆ. ದುರಸ್ತಿ ನಂತರ ಮತ್ತೆ ಚಾಲನೆಗೆ ಬರಲಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಸೋಶಿಯಲ್ ಮೀಡಿಯಾ ಪ್ರಸ್ತುತ ಪ್ರಬಲವಾಗಿದೆ. ಆದ್ದರಿಂದ ನಾವು ಜಾಹಿರಾತನ್ನು ಸಾಮಾಜಿಕ ಜಾಲತಾಣದಲ್ಲಿ ನೀಡಿದಾಗ ಸಣ್ಣ ಮಕ್ಕಳಿಂದ ಹಿರಿಯರವರೆಗೂ ನೋಡುತ್ತಾರೆ. ಇದರಿಂದ ವಿಶ್ವವಿದ್ಯಾನಿಲಯದ ಪ್ರವೇಶಾತಿಗೆ ಅನುಕೂಲವಾಗಬಹುದು ಇದರ ಉದ್ದೇಶದ ಸಾರ್ಥಕತೆಯನ್ನು ಹೊಂದಬಹುದೆಂದು ಸಭೆಗೆ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ ಸಂಚಿತ ವೇತನದಡಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಮೂರು-ಐದು-ಹತ್ತು-ಹದಿನೈದು ವರ್ಷಕ್ಕೊಮ್ಮೆ ಹೀಗೆ ಸಂಚಿತ ವೇತನವನ್ನು ಹೆಚ್ಚಿಸಲಾಗುತ್ತಿತ್ತು. ಆದರೆ ಮೂರು ವರ್ಷಗಳಿಂದ ಅಂದರೆ 2020 ರಿಂದ ವೇತನವನ್ನು ಹೆಚ್ಚಿಸಿಲ್ಲ ಎಂಬುದು

ತಮ್ಮ ಗಮನಕ್ಕೆ ಬಂದಿರುವುದನ್ನು ಸಭೆಯ ಗಮನಕ್ಕೆ ತಂದರು. ಏಕೆ ಮೂರು ವರ್ಷಗಳಿಂದ ವೇತನವನ್ನು ಹೆಚ್ಚಿಸಲು ಕ್ರಮಕೈಗೊಂಡಿಲ್ಲ ಎಂಬುವುದರ ಬಗ್ಗೆ ಮಾಹಿತಿಯನ್ನು ಕೋರಿದರು.

ಹಣಕಾಸು ಅಧಿಕಾರಿಯವರು ಮಾತನಾಡಿ ಈಗಿರುವ ಆರ್ಥಿಕ ಸ್ಥಿತಿಯಲ್ಲಿ ವೇತನವನ್ನು ಹೆಚ್ಚಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರತಿ ಮಾಹೆಯ ವೇತನವನ್ನು ನೀಡಲು ಕಷ್ಟವಾಗುತ್ತಾ ಇದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ವೇತನವನ್ನು ಸರಿಹೊಂದಿಸಲು ತುಂಬ ಕಷ್ಟವಾಗುತ್ತಾ ಇದೆ ಎಂದರಲ್ಲದೇ ಅಂದಾಜು 2000 ಉದ್ಯೋಗಿಗಳು-ತಾತ್ಕಾಲಿಕ ಬೋಧಕೇತರರು ಹಾಗೂ ಅತಿಥಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆಲ್ಲರಿಗೂ ಪ್ರತಿ ಮಾಹೆಯಲ್ಲು ವೇತನವನ್ನು ಸರಿಹೊಂದಿಸಲು ಕಷ್ಟವಾಗುತ್ತಿದೆ ಎಂದು ಸಭೆಗೆ ತಿಳಿಸಿದರು ಹಾಗೂ ಮುಂದೆ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯು ಉತ್ತಮಗೊಂಡಾಗ ಕ್ರಮವಹಿಸಬಹುದಾಗಿದೆಯೆಂದು ತಿಳಿಸಿದರು. ಈ ವಿಷಯದ ಸಂಬಂಧ 2022ರ ಡಿಸೆಂಬರ್ ಮಾಹೆಯಲ್ಲಿ ರಾಜ್ಯದ ಹಣಕಾಸು ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಟಿಪ್ಪಣಿ ನೀಡಿರುವುದನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ ನಮ್ಮ ವಿಶ್ವವಿದ್ಯಾನಿಲಯದ ಲಾಂಛನದಲ್ಲಿ "Na hi Jnanena Sadrisham" ಎಂದಿದೆ. ಇದರ ಅರ್ಥ ಇಂಗ್ಲೀಷ್‌ನಲ್ಲಿ Nothing is equal to knowledge ಹಾಗೂ ಕನ್ನಡದಲ್ಲಿ "ಜ್ಞಾನಕ್ಕಿಂತ ಮಿಗಿಲಾದುದು ಯಾವುದು ಇಲ್ಲ" ಎಂಬ ಅರ್ಥ ಇದೆ. ಆದರೆ ಸುಮಾರು ಸಾಹಿತಿಗಳು ಕನ್ನಡದಲ್ಲಿರುವ 'ಜ್ಞಾನಕ್ಕಿಂತ ಮಿಗಿಲಾದುದು ಯಾವುದು ಇಲ್ಲ' ಎಂಬುದು ತಪ್ಪರ್ಥವನ್ನು ನೀಡುತ್ತದೆ. "ಜ್ಞಾನಕ್ಕಿಂತ ಸಮಾನವಾದುದು ಯಾವುದು ಇಲ್ಲ" ಎಂಬುದು ಸರಿಯಾದುದು ಎಂದು ತಿಳಿಸಿರುತ್ತಾರೆ. ಹಾಗೆಯೇ ನಾನು ಸಹ ಪುಸ್ತಕವನ್ನು ಪರಿಶೀಲಿಸಿ ನೋಡಿದಾಗ ಅದರಲ್ಲಿ "ಜ್ಞಾನಕ್ಕಿಂತ ಸಮಾನವಾದುದು ಯಾವುದು ಇಲ್ಲ" ಎಂಬ ವಾಕ್ಯ ಇರಬೇಕಾಗಿದೆ. ಆದ್ದರಿಂದ ಇದನ್ನು ಬದಲಾಯಿಸುವುದಾಗಿ ಸಭೆಯ ಗಮನಕ್ಕೆ ತಂದರು.

"ಜ್ಞಾನಕ್ಕಿಂತ ಮಿಗಿಲಾದುದು ಯಾವುದು ಇಲ್ಲ" ಎಂಬ ವಾಕ್ಯವನ್ನು "ಜ್ಞಾನಕ್ಕಿಂತ ಸಮಾನವಾದುದು ಯಾವುದು ಇಲ್ಲ" ಎಂದು ಬದಲಾಯಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಶಿಕ್ಷಣ ಅಧ್ಯಯನ ವಿಭಾಗದಲ್ಲಿ ನಾಲ್ಕು ಖಾಯಂ ಅಧ್ಯಾಪಕ ಸಿಬ್ಬಂದಿಗಳು ಇದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಕುಲಸಚಿವ (ಪರೀಕ್ಷಾಂಗ)ರಾಗಿ ಒಬ್ಬರು ಹೋಗಿದ್ದಾರೆ. ಇನ್ನೂ ನಾಲ್ಕು 4 ಅತಿಥಿ ಉಪನ್ಯಾಸಕರುಗಳು ನ್ಯಾಯಾಲಯದ ಆದೇಶ ಪಡೆದು ಉಪನ್ಯಾಸಕರಾಗಿ ಮುಂದುವರೆದಿದ್ದಾರೆ. ಕಳೆದ 10 ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ 3 ಉಪನ್ಯಾಸಕರು ಅತ್ಯಂತ ವಿದ್ವಾಂಸರುಗಳಾಗಿದ್ದಾರೆ. ಇವರ ವಿದ್ಯಾರ್ಹತೆಯನ್ನು ಗಮನಿಸಿದರೆ ಬಹಳ ಸಂತೋಷವಾಗುತ್ತದೆ. ಅದರಲ್ಲಿ ಒಬ್ಬರು M.Sc, M.Ed, B.Ed, M.Phil, NET, Ph.D ವಿದ್ಯಾರ್ಹತೆಯನ್ನು ಹೊಂದಿರುತ್ತಾರೆ. ಇದೇ ರೀತಿ ಇನ್ನು ಮೂರು ಅತಿಥಿ ಉಪನ್ಯಾಸಕರುಗಳು ಕೂಡ ಉನ್ನತ ವಿದ್ಯಾರ್ಹತೆಯನ್ನು ಹೊಂದಿರುತ್ತಾರೆ. ಇವರಿಗೆ ಕಳೆದ ಮೂರು ತಿಂಗಳಿಂದ ನೇಮಕಾತಿ ಆದೇಶ ನೀಡಿರುವುದಿಲ್ಲ. ಕಾರಣ ಕಾರ್ಯಭಾರ ಸಮಿತಿ ಶಿಫಾರಸ್ಸು ಮಾಡಿದ್ದಾರೆ. ಕಾರ್ಯಭಾರವನ್ನು ಮಾಡಬೇಕಾದವರು ಶಿಕ್ಷಣ ವಿಭಾಗದ ಶಿಕ್ಷಣ ತಜ್ಞರು ಅಥವಾ ವಿಭಾಗದ ಮುಖ್ಯಸ್ಥರು ಮಾಡಬೇಕು. ಯಾರೊಂದಿಗು ಸಮಾಲೋಚನೆ ಮಾಡದೆ ಶಿಕ್ಷಣ ವಿಭಾಗದ ಅಭಿಪ್ರಾಯವನ್ನು ಪಡೆಯದೆ ಪ್ರೊ. ಶ್ರೀಧರ್ ಅವರ ಸ್ನಾತಕೋತ್ತರ ಕಾರ್ಯಭಾರ ಸಮಿತಿಯ ಶಿಫಾರಸ್ಸಿನ ಮೇರೆಗೆ ಇವರುಗಳಿಗೆ ನೇಮಕಾತಿ ಆದೇಶ ನೀಡಿರುವುದಿಲ್ಲ. ಅವರುಗಳು ತಮ್ಮ ಆರ್ಥಿಕ ಸಂಕಷ್ಟಗಳನ್ನು ತಮ್ಮೊಂದಿಗೆ ಹೇಳಿಕೊಂಡಿರುವುದಾಗಿ ತಿಳಿಸಿದರು. ಈ ರೀತಿ 10 ವರ್ಷ ಸೇವೆ ಸಲ್ಲಿಸಿರುವವರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನೇಮಕಾತಿ ಆದೇಶ ನೀಡದೆ ಇರುವುದು ಸರಿಯಾದ ಕ್ರಮವಲ್ಲ. ಈಗಾಗಲೇ ನಾವು ಎರಡೆರಡು ಕಡೆ ಕೆಲಸವನ್ನು ನಿರ್ವಹಿಸಿರುವಂತಹವರಿಗು

ಕಾರ್ಯಭಾರವನ್ನು ನೀಡಿದ್ದೇವೆ. ಆದ್ದರಿಂದ ತಾವು ದಯವಿಟ್ಟು ಇವರಿಗೆ ನೇಮಕಾತಿ ಆದೇಶ ನೀಡಬೇಕೆಂದು ಸಭೆಗೆ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ CBCS-Regulations (PG) ಪ್ರಕಾರ ಸ್ನಾತಕೋತ್ತರ ಪದವಿ ಪಡೆಯಲು 72+4(OE) ಕ್ರೆಡಿಟ್‌ಗಳನ್ನು ನಿಗಧಿಪಡಿಸಿದ್ದು, ಆದರೆ ಶಿಕ್ಷಣ ವಿಭಾಗದಲ್ಲಿ 96 ಕ್ರೆಡಿಟ್ಸ್ ನೀಡಿರುತ್ತಾರೆ. ರಸಾಯನಶಾಸ್ತ್ರ ಮತ್ತು ಜೈವಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗಗಳಲ್ಲಿ ಕ್ರಮವಾಗಿ 96 ಮತ್ತು 106 ಕ್ರೆಡಿಟ್‌ಗಳಂತೆ ನಿಗಧಿಪಡಿಸಿ, ಕಾರ್ಯಭಾರವನ್ನು ಜಾಸ್ತಿ ಮಾಡಿರುವುದು ಮತ್ತು ಇತರೆ ಕೆಲವೊಂದು ಅಧ್ಯಯನ ವಿಭಾಗಗಳಲ್ಲಿ ಸಹ ಈ ರೀತಿ ಇದ್ದುದರಿಂದ, ಪ್ರೊ. ಎಂ.ಎ. ಶ್ರೀಧರ್, ಭೌತಶಾಸ್ತ್ರ ಅಧ್ಯಯನ ವಿಭಾಗ, ನಿರ್ದೇಶಕರು, ಪಿ.ಎಂ.ಇ.ಬಿ. ಮತ್ತು ಇತರ ಅಧ್ಯಯನ ವಿಭಾಗಗಳ ಪ್ರಾಧ್ಯಾಪಕರಗಳನ್ನೊಳಗೊಂಡ ಸಮಿತಿ ರಚಿಸಿದ್ದು, ಸದರಿ ಸಮಿತಿಯ ರಚಿಸಿದ್ದ ಮಾರ್ಗಸೂಚಿಯನ್ನು ಶೈಕ್ಷಣಿಕ ಮಂಡಳಿಯು ಅನುಮೋದಿಸಿದ್ದು, ಅದರಂತೆ ಕಾರ್ಯಭಾರವನ್ನು ಸಿದ್ಧಪಡಿಸಿ ಕಳುಹಿಸುವಂತೆ ಎಲ್ಲಾ ಅಧ್ಯಯನ ವಿಭಾಗಗಳಿಗೆ ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರಂತೆ, ಶಿಕ್ಷಣ ಅಧ್ಯಯನ ವಿಭಾಗವೂ ಸೇರಿದಂತೆ ಎಲ್ಲಾ ಅಧ್ಯಯನ ವಿಭಾಗಗಳು ಕಾರ್ಯಭಾರ ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಈಗಾಗಲೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವ ಅತಿಥಿ ಉಪನ್ಯಾಸಕರ ಕಾರ್ಯಭಾರ ಹೊರತುಪಡಿಸಿ, ಉಳಿಕೆ ಕಾರ್ಯಭಾರವನ್ನು ಉಳಿದ ಅತಿಥಿ ಉಪನ್ಯಾಸಕರಿಗೆ ಹಂಚಬೇಕಿರುತ್ತದೆ. ಯಾವ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಬಾರದೆಂಬ ನಿಲುವು ವಿಶ್ವವಿದ್ಯಾನಿಲಯಕ್ಕಿರುವುದಿಲ್ಲ. Dissertation and seminarಗೂ ಸಹ ಕಾರ್ಯಭಾರವನ್ನು ತೋರಿಸುತ್ತಾರೆ. ಈ ರೀತಿಯ ಕಾರ್ಯಭಾರವನ್ನು ನೀಡಲು ಅವಕಾಶವಿಲ್ಲ. ಈ ರೀತಿಯ ಸಮಸ್ಯೆ ಮೂರು ನಾಲ್ಕು ವಿಭಾಗಗಳಲ್ಲಿ ಇದೆ. ಈಗಾಗಲೇ ನ್ಯಾಯಾಲಯದ ಮೊರೆ ಹೋಗಿರುವ ತಾತ್ಕಾಲಿಕ ಉಪನ್ಯಾಸಕರಿಗೆ ಕಾರ್ಯಭಾರ ಕಡಿಮೆ ಮಾಡುವ ಸಂಬಂಧ ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ. ಶಿಕ್ಷಣ ವಿಭಾಗದಲ್ಲಿ ಕಾರ್ಯಭಾರವು ತುಂಬಾ ಕಡಿಮೆ ಇರುವುದರಿಂದ ಅವರುಗಳಿಗೆ ಆದೇಶ ನೀಡಲು ಸಾಧ್ಯವಾಗಿಲ್ಲ. ಆದ್ದರಿಂದ ಇಂದೇ ಮಧ್ಯಾಹ್ನ ಶಿಕ್ಷಣ ವಿಭಾಗದ ಅಧ್ಯಕ್ಷರನ್ನು ಕರೆದು ಕಾರ್ಯಭಾರವನ್ನು ಗಮನಿಸಿ ಅವರಿಗೆ ಆದೇಶ ನೀಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಶಿಕ್ಷಣ ವಿಭಾಗದ ಸಂಶೋಧನಾ ವಿದ್ಯಾರ್ಥಿಗಳು ಉಪನ್ಯಾಸವನ್ನು ನೀಡುತ್ತಿರುವುದರಿಂದ ಅತಿಥಿ ಉಪನ್ಯಾಸಕರುಗಳಿಗೆ ಕಾರ್ಯಭಾರವಿರುವುದಿಲ್ಲ. ಆದ್ದರಿಂದ ಇವುಗಳೆಲ್ಲವನ್ನು ಗಮನಿಸಿ ಈ ಮೂರು ಅತಿಥಿ ಉಪನ್ಯಾಸಕರುಗಳಿಗೆ ಪ್ರಸ್ತುತ ಶೈಕ್ಷಣಿಕ ಸಾಲಿಗೆ ಒಂದು ವರ್ಷದ ಅವಧಿಗೆ ನೇಮಕಾತಿ ಆದೇಶವನ್ನು ನೀಡಬೇಕೆಂದು ಕೋರಿದರು. ಈ ವಿಷಯಕ್ಕೆ ಶ್ರೀ ಗೋಕುಲ್ ಗೋವರ್ಧನ್ ಅವರು ಸಹಮತ ವ್ಯಕ್ತಪಡಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ ಶತಮಾನೋತ್ಸವದ ನೆನಪಿಗಾಗಿ School of Law, Molecular Biology, Genetics and Genomics, Organic Chemistry and Public Administration ಒಟ್ಟು ಐದು ಹೊಸ ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ತೆರೆಯಲಾಗಿದೆ. ನಿಯಮಬದ್ಧವಾಗಿ ಸಾರ್ವಜನಿಕವಾಗಿ ಅಧಿಸೂಚಿಸಿ, ವೇತನವನ್ನು ನಿಗದಿ ಮಾಡಿ 5 ನೂತನ ಅಧ್ಯಯನ ವಿಭಾಗಗಳಿಗೆ ಉಪನ್ಯಾಸಕರನ್ನು ನೇಮಕ ಮಾಡಲಾಗಿ, ಐದು ವರ್ಷ ಯಶಸ್ವಿಯಾಗಿ ಈ ಅಧ್ಯಯನ ವಿಭಾಗಗಳು ಸಕ್ರಿಯವಾಗಿ ನಡೆದಿವೆ. ಈ ವರ್ಷ ಏಪ್ರಿಲ್‌ನಿಂದ ತಾತ್ಕಾಲಿಕ ಉಪನ್ಯಾಸಕರುಗಳನ್ನು ಮೌಲ್ಯಮಾಪನಕ್ಕೆ, ಪಾಠ ಮಾಡುವುದಕ್ಕೆ ಮತ್ತು ಇತರ ಚಟುವಟಿಕೆಗಳಿಗೆ ಅವರ ಸೇವೆಯನ್ನು ಪಡೆಯಲಾಗಿದೆ. ಆದರೆ ಅವರಿಗೆ ನೇಮಕಾತಿ ಆದೇಶ ಹಾಗೂ ವೇತನವನ್ನು ನೀಡಿರುವುದಿಲ್ಲ. ನಾವು ಈ ಮೊದಲೇ ಚರ್ಚಿಸಿದ ಹಾಗೆ ಈ ವಿಷಯವಾಗಿ ಒಂದು ಸಮಿತಿ ಮಾಡುವುದಾಗಿ ತಿಳಿಸಿದ್ದೀರಿ. ಸಮಿತಿಯು ರಚನೆಯಾಗಿದೆಯೇ ಎಂಬುದರ ಬಗ್ಗೆ ಮತ್ತು ಕ್ರಮಕೈಗೊಂಡಿರುವುದರ ಬಗ್ಗೆ ಮಾಹಿತಿಯನ್ನು ಕೋರಿದರು. ಈ ಐದು ಅಧ್ಯಯನ ವಿಭಾಗಗಳ

ತಾತ್ಕಾಲಿಕ ಉಪನ್ಯಾಸಕರುಗಳಿಗೆ ನೇಮಕಾತಿ ಆದೇಶ ಹಾಗೂ ವೇತನವನ್ನು ನೀಡಬೇಕೆಂದು ಸಭೆಯಲ್ಲಿ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ಉಪನ್ಯಾಸಕರುಗಳನ್ನು ಐದು ವರ್ಷಕ್ಕೆ ನೇಮಕಾತಿ ಮಾಡಿದ್ದು, ಆ ಅವಧಿಯು ಮುಗಿದಿದೆ. ಜೊತೆಗೆ ಇವರುಗಳು ಉಚ್ಛನ್ಯಾಯಾಲಯದ ಮೊರೆ ಹೋಗಿದ್ದು, ನ್ಯಾಯಾಲಯವು ಇವರುಗಳ ಪ್ರಕರಣವನ್ನು ಮುಕ್ತಾಯಗೊಳಿಸಿದೆ. ಹಿಂದಿನ ಕುಲಪತಿಗಳು ಮಾನವೀಯ ದೃಷ್ಟಿಯಿಂದ ಇವರುಗಳನ್ನು ಎರಡು ವರ್ಷಗಳ ಅವಧಿಗೆ ಮುಂದುವರೆಸಿದ್ದರು. ಆ ಅವಧಿಯು ಸಹ ಮುಗಿದಿದೆ. ಪುನಃ ಎರಡು ವಿಭಾಗಗಳ ಉಪನ್ಯಾಕರುಗಳು ಕೋರ್ಟಿನ ಮೊರೆ ಹೋಗಿರುತ್ತಾರೆ. ಅವರುಗಳ ನೇಮಕಾತಿಯನ್ನು ನಿಯಮಾವಳಿಗಳ ಪ್ರಕಾರ ಮಾಡಿರುವುದಿಲ್ಲ. ಕೆಲವೊಂದು ವಿಭಾಗದಲ್ಲು ಈ ರೀತಿ ಉಪನ್ಯಾಸಕರುಗಳನ್ನು ನೇಮಿಸಲಾಗಿದೆ. ಉದಾಹರಣೆಗೆ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಕಾನೂನು ಅಧ್ಯಯನ ವಿಭಾಗದಲ್ಲಿ ಈ ರೀತಿಯ ತಾತ್ಕಾಲಿಕ ಉಪನ್ಯಾಸಕರುಗಳನ್ನು ನೇಮಕ ಮಾಡಲಾಗಿದೆ. ಇವರುಗಳಿಗೆ ರೂ. 50,000/-ಗಳ ವೇತನವನ್ನು ನಿಗಧಿ ಮಾಡಿದ್ದು, ಅವರುಗಳಿಗೆ ಸ್ವಯಂ ಆರ್ಥಿಕ ಯೋಜನೆಯಡಿಯಲ್ಲಿ ನೀಡಲಾಗುವುದೆಂದು ನಿರ್ಣಯವಾಗಿತ್ತು. ಹಾಗೆಯೇ ಪೂರ್ಣ ಪ್ರಮಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ರೂ. 28,000/-ಗಳ ವೇತನವನ್ನು ನೀಡಲಾಗಿದೆ. ಈ ತಾರತಮ್ಯವೇಕೆ ಎಂದು ಕೆಲವು ಅತಿಥಿ ಉಪನ್ಯಾಸಕರುಗಳು ಪ್ರಶ್ನಿಸುತ್ತಿದ್ದಾರೆ ಎಂದು ಸಭೆಗೆ ತಿಳಿಸಿದರು. ಈ ವಿಷಯವು ಪ್ರಸ್ತುತ ಕೋರ್ಟಿನಲ್ಲಿರುವುದರಿಂದ ಕೋರ್ಟಿನ ಆದೇಶದ ಮೇರೆಗೆ ಕ್ರಮವಹಿಸಲಾಗುವುದೆಂದು ಹಾಗೂ ಈಗಾಗಲೇ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಿದ್ದರೂ ಯಾವುದೇ ರೀತಿಯ ಕ್ರಮವನ್ನು ಕೈಗೊಳ್ಳಲಾಗುವುದಿಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಈಗಾಗಲೇ ಅವರ ಸೇವೆಯನ್ನು ಪಡೆದಿರುವುದರಿಂದ ಅವರಿಗೆ ನೇಮಕಾತಿ ಆದೇಶ ಹಾಗೂ ವೇತನವನ್ನು ನೀಡಬೇಕೆಂದು ಮನವಿ ಮಾಡಿದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ ಸ್ಕೂಲ್ ಆಫ್ ಲಾ ಗೆ ಸಂಬಂಧಿಸಿದ ತಾತ್ಕಾಲಿಕ ಉಪನ್ಯಾಸಕರಿಗೂ ನೇಮಕಾತಿ ಆದೇಶವನ್ನು ನೀಡದೆ ಇರುವ ಬಗ್ಗೆ ಹಲವಾರು ದೂರವಾಣಿ ಕರೆಗಳು ಬೇರೆಯವರಿಂದ ಬಂದಿರುವುದಾಗಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಮಂಡ್ಯದ ತೂಬಿನಕೆರೆ ಸ್ನಾತಕೋತ್ತರ ಕೇಂದ್ರದಲ್ಲಿ ಸಂಗ್ರಹಿಸಲಾಗಿರುವ ಶುಲ್ಕದಿಂದ ಅಲ್ಲಿನ ಉಪನ್ಯಾಸಕರಿಗೆ ಒಂದು ವರ್ಷದ ಅವಧಿಗೆ ಅವರ ಸೇವೆಯನ್ನು ಮುಂದುವರೆಸಲಾಗಿದೆ, ಹಾಗೆಯೇ ಆದೇಶವನ್ನು ನೀಡಲಾಗಿದೆ. ತಾತ್ಕಾಲಿಕ ಭೋದಕೇತರರಿಗೆ ಸಂಬಂಧಿಸಿದಂತೆ ಸರ್ಕಾರದಿಂದ ತೀರ್ಮಾನವಾಗಬೇಕೆಂದು ಕಳೆದ ಬಾರಿ ತಾವು ಹೇಳಿದ್ದೀರಿ. ಈಗಾಗಲೇ ನಾವು ಅತಿಥಿ ಉಪನ್ಯಾಸಕರಿಗೆ ನೇಮಕಾತಿ ಆದೇಶ ನೀಡಿದ್ದೇವೆ. 2ನೇ ವರ್ಷದ ಸ್ನಾತಕೋತ್ತರ ಕೆಲಸ ಕಾರ್ಯಗಳು ನಡೆಯುತ್ತಿವೆ. ಅಂತಹ ಕೆಲಸಗಳಿಗೆ ಕೆಲಸ ಮಾಡುತ್ತಿರುವವರು ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳು. ಮಾನವೀಯತೆ ದೃಷ್ಟಿಯಿಂದ ಅವರಿಗೂ ಕನಿಷ್ಟ ಒಂದು ವರ್ಷ ಅವರನ್ನು ಮುಂದುವರೆಸಿ ಅವರಿಗೆ ಭಾಗಶಃ ಏನಾದರೂ ಒಂದು ಪರಿಹಾರ ನೀಡಬೇಕೆಂದು ಮನವಿ ಮಾಡಿದರು. ಅವರಿಗೆ ಆರು ತಿಂಗಳಿಂದ ವೇತನ ನೀಡಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ ಬೋಧಕ ಸಿಬ್ಬಂದಿಗಳ ಅವಶ್ಯಕತೆ ಇದೆ. ಕಾರಣ ಶೈಕ್ಷಣಿಕವಾಗಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ಆಗಬಾರದೆಂಬ ದೃಷ್ಟಿಯಿಂದ ಅವರಿಗೆ ನಾವು ಆದೇಶವನ್ನು ನೀಡಿದ್ದೇವೆ. ಜೊತೆಗೆ ಮಂಡ್ಯ ವಿಶ್ವವಿದ್ಯಾನಿಲಯ ಆದ ನಂತರ ನಾವು ಸಿಬ್ಬಂದಿಗಳ ಜೊತೆಗೆ ಪಿ.ಜಿ.ಕೇಂದ್ರಕ್ಕೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹಸ್ತಾಂತರಿಸಲಾಗಿದೆ. ಬೋಧಕೇತರ ಸಿಬ್ಬಂದಿಗಳಿಗೆ ನಾವೇನಾದರೂ ಆದೇಶ ನೀಡಿ ವೇತನವನ್ನು ನೀಡಿದ್ದಲ್ಲಿ ಆಡಿಟ್ ಆಕ್ಷೇಪಣೆಯಾಗುತ್ತದೆ. ಆಡಿಟ್‌ರವರು ನಿಮ್ಮಲಿರುವ ಸಿಬ್ಬಂದಿಗಳನ್ನೇ ಉಪಯೋಗಿಸಿಕೊಳ್ಳಿ ಎಂದು ತಿಳಿಸುತ್ತಾರೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ನಾವು ಈಗಾಗಲೇ ಸರ್ಕಾರಕ್ಕೆ ಎರಡು-ಮೂರು ಪತ್ರಗಳನ್ನು ಬರೆದಿದ್ದೇವೆ. ಸರ್ಕಾರದಲ್ಲಿ ಇದರ ಬಗ್ಗೆ ಚರ್ಚೆ

ನಡೆಯುತ್ತಿದೆ ಇದು ಮೈಸೂರು ವಿಶ್ವವಿದ್ಯಾನಿಲಯದ ಒಂದೇ ಸಮಸ್ಯೆ ಅಲ್ಲ, ಹೊಸದಾಗಿ ಆದಂತಹ ಏಳು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಸಮಸ್ಯೆಯಾಗಿದೆ.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ತಾತ್ಕಾಲಿಕ ಬೋಧಕೇತರ ಸಿಬ್ಬಂದಿ ವರ್ಗದವರು ಕರ್ತವ್ಯವನ್ನು ನಿರ್ವಹಿಸಿದೆ ಇದ್ದ ಸಂದರ್ಭದಲ್ಲಿ ಅಲ್ಲಿನ ಕೆಲಸ ಕಾರ್ಯಗಳು ನಿಂತುಹೋಗುವುದಿಲ್ಲವೇ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಮಂಡ್ಯ ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳು ಹಾಗೂ ಕುಲಸಚಿವರು ಇದ್ದಾರೆ. ಅವರುಗಳೇ ಅದರ ಬಗ್ಗೆ ನಿರ್ಣಯಿಸಬಹುದು. ಮತ್ತೆ ಏನಾದರೂ ವಾಪಸ್ಸಾದಲ್ಲಿ ಅವರನ್ನು ಮರು ನೇಮಕ ಮಾಡಬಹುದು ಯಾವ ರೀತಿ ಸಮಸ್ಯೆ ಆಗುವುದಿಲ್ಲವೆಂದು ಅಲ್ಲಿಯೇ ಕಾಲೇಜುಗಳ ಸಂಯೋಜನೆಗಳ ಕಾರ್ಯ ಹಾಗೂ ಇನ್ನಿತರ ಎಲ್ಲಾ ಚಟುವಟಿಕೆಗಳು ನಡೆಯುತ್ತಿವೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಮಂಡ್ಯ ವಿಶ್ವವಿದ್ಯಾನಿಲಯಕ್ಕೆ ಇನ್ನೂ ಹಸ್ತಾಂತರ ಆಗದೆ ಇರುವ ಬಗ್ಗೆ ಪ್ರಸ್ತಾಪಿಸಿದರು.

ಕುಲಸಚಿವರು ಮಾತನಾಡಿ, ಕಾಲೇಜುಗಳ ಸಂಯೋಜನೆ (ಅಫಿಲಿಯೇಷನ್) ಅವರಿಗೆ ಸಂಬಂಧಿಸಿದ್ದು, ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ ನವೆಂಬರ್ 2022 ರ ಪ್ರಕಾರ ಚರಾಸ್ತಿ ಮತ್ತು ಸ್ಥಿರಾಸ್ತಿಗಳೆಲ್ಲವನ್ನು ಹಸ್ತಾಂತರಿಸಲಾಗಿದೆ ಎಂದು ತಿಳಿಸಿದರು. ಹಾಗೆಯೇ ಯಾರು ಯಾರು ಹುದ್ದೆಗೆ ಎದುರಾಗಿ ಹೆಚ್ಚುವರಿಯಾಗಿ ನೇಮಕಗೊಂಡಿರುವವರನ್ನು ತರ್ಕಬದ್ಧಗೊಳಿಸಿ ಇತರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಎಂದು ಸರ್ಕಾರದಿಂದ ಸುತ್ತೋಲೆ ಬಂದಿದೆ. ಈ ರೀತಿ ಮಾಡದೆ ಇದ್ದಲ್ಲಿ ಕುಲಪತಿಗಳು, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಯವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದಾರೆ ಎಂದು ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಯುವರಾಜ ಕಾಲೇಜಿನಲ್ಲಿ ನ್ಯಾಯಾಲಯದ ಆದೇಶದ ಮೇಲೆ ಬಿಡುಗಡೆಗೊಳಿಸಿ ಎಂದು ಬಂದಿದ್ದವರನ್ನು ಮತ್ತೆ ಅವರುಗಳನ್ನು ಮರು ನೇಮಕ ಮಾಡಿ ಅವರಿಗೆ ರಜಾ ದಿನಗಳಲ್ಲಿ ಕೂಡ ವೇತನವನ್ನು ನೀಡಲಾಗಿದೆ ಎಂದು ಕಳೆದ ಸಿಂಡಿಕೇಟ್ ಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿರುವುದಾಗಿ ತಿಳಿಸಿದರು. ಹಣಕಾಸು ಅಧಿಕಾರಿಯವನ್ನು ಎರಡು ತಿಂಗಳು ಹೆಚ್ಚಾಗಿ ವೇತನ ನೀಡಿರುವುದನ್ನು ಪರಿಶೀಲಿಸಿದ್ದೀರ ಎಂದು ಪ್ರಶ್ನಿಸಿದರು.

ಹಣಕಾಸು ಅಧಿಕಾರಿಯವರು ಮಾತನಾಡಿ ಅಂತಹವರಿಗೆ ಯಾವುದೇ ವೇತನವನ್ನು ನೀಡಿಲ್ಲ, ಕೇವಲ 10 ತಿಂಗಳು ಮಾತ್ರ ವೇತನವನ್ನು ನೀಡಿರುವುದಾಗಿ ತಿಳಿಸಿದರು.

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್, ಮಾತನಾಡಿ ವಿದ್ಯಾರ್ಥಿಗಳು ಪರೀಕ್ಷೆಯ ಫಲಿತಾಂಶಕ್ಕಾಗಿ ಮುಷ್ಕರ ಮಾಡುತ್ತಾ ಇದ್ದಾರೆ ಎಂದು ಹೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ UUCMS ಬಗ್ಗೆ ಪ್ರಸ್ತಾಪಿಸುತ್ತಾ ಇದ್ದಾರೆ ಅದು ನಮ್ಮ ನಿಯಂತ್ರಣದಲ್ಲಿ ಇಲ್ಲ ಅದು ಸರ್ಕಾರದ ನಿಯಂತ್ರಣಕ್ಕೆ ಬರುತ್ತದೆ. ಅಂಕಪಟ್ಟಿಯ ಬಗ್ಗೆ ತೊಂದರೆ ಇದೆ. ಎರಡನೆಯದಾಗಿ ಪರೀಕ್ಷೆಗೆ ಸಂಬಂಧಿಸಿದಂತೆ ಹಾಗೂ ಲೇಖನ ಸಾಮಗ್ರಿಗಳ ಕೊರತೆಯ ಬಗ್ಗೆ ಬಗೆಹರಿಸುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಶಿಷ್ಯವೇತನವನ್ನು 20 ಮಂದಿಗೆ ನೀಡುತ್ತಿದ್ದೆವು. ಕಳೆದ ವರ್ಷ 140 ವಿದ್ಯಾರ್ಥಿಗಳಿಗೆ ನೀಡಿದ್ದಾರೆ. ಎಸ್‌ಸಿ/ಎಸ್‌ಟಿ ಘಟಕದಲ್ಲಿ ಈಗಾಗಲೇ 45 ಮಂದಿ ಅರ್ಜಿಯನ್ನು ಹಾಕಿದ್ದಾರೆ. ಆದರೆ ಪ್ರಸ್ತುತ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದಿರುವುದರಿಂದ ಯಾವ ರೀತಿ ಕ್ರಮಕೈಗೊಳ್ಳುವುದು ಎಂದು ಸಭೆಯ ಗಮನಕ್ಕೆ ತಂದರು. ಒಬ್ಬ

ಸಂಶೋಧನಾ ವಿದ್ಯಾರ್ಥಿಗೆ ನೀಡಿದರೆ 5 ವರ್ಷಗಳವರೆಗೂ ನೀಡಬೇಕಾಗುತ್ತದೆ. ಇವರ ಶಿಷ್ಯ ವೇತನವು ಅತಿಥಿ ಉಪನ್ಯಾಸಕರುಗಳಿಗಿಂತ ಜಾಸ್ತಿ ಇದೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ವಿಶ್ವವಿದ್ಯಾನಿಲಯದ ಆರ್ಥಿಕ ಸ್ಥಿತಿಗತಿಯ ಬಗ್ಗೆ ವಿವರಿಸಿ ಸರ್ಕಾರಕ್ಕೆ ಪತ್ರ ಬರೆಯುವುದು ಸೂಕ್ತವೆಂದರು. ಹಾಗೂ ಪಿಎಚ್.ಡಿ.ಗೆ ಅರ್ಜಿಯನ್ನು ಆಹ್ವಾನಿಸುವಾಗ ಎಷ್ಟು ಖಾಲಿ ಇದೆ ಅಷ್ಟಕ್ಕೆ ಮಾತ್ರ ಅರ್ಜಿಯನ್ನು ಕರೆಯಲಾಗುತ್ತಿದೆಯಾ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಪಿಎಚ್.ಡಿ. ಸಂಬಂಧಿಸಿದಂತೆ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು. ನಾವು ಯಾರಿಗೂ ಪಿಎಚ್.ಡಿ.ಗೆ ಮಾರ್ಗದರ್ಶಕರನ್ನು ನೀಡುವುದಕ್ಕೆ ಯಾವುದೇ ಗ್ಯಾರಂಟಿಯನ್ನು ಕೊಡಲು ಆಗುವುದಿಲ್ಲ. ಹಾಗೂ ಕೆಲವೊಂದು ವಿಷಯಗಳಲ್ಲಿ ಮಾರ್ಗದರ್ಶಕರು ಇರುವುದಿಲ್ಲ. ಮಾರ್ಗದರ್ಶಕರು ಇಲ್ಲದ ಮೇಲೆ ಪರೀಕ್ಷೆಯನ್ನು ಯಾಕೆ ನಡೆಸಿದ್ದೀರಿ ಎಂದು ವಿದ್ಯಾರ್ಥಿಗಳು ಪ್ರಶ್ನಿಸುತ್ತಾರೆ. ಮಾರ್ಗದರ್ಶಕರನ್ನು ಹುಡುಕಿ ಕೊಡುವುದು ನಮ್ಮ ಕೆಲಸವಲ್ಲಾ ಅದು ವಿದ್ಯಾರ್ಥಿಗಳ ಕೆಲಸವಾಗಿರುತ್ತದೆ ಎಂದು ತಿಳಿಸಿದರು.

ಡಾ ಟಿ.ಆರ್. ಚಂದ್ರಶೇಖರ್ ಮಾತನಾಡಿ ಇನ್ನು ಮುಂಬರುವ ಸಿಂಡಿಕೇಟ್ ಸಭೆಯನ್ನು ಬೆಳಗ್ಗೆ 11.00 ಗಂಟೆ ನಿಗಧಿಸಬೇಕೆಂದು ಮನವಿ ಮಾಡಿದರು. ಮಾನ್ಯ ಕುಲಪತಿಯವರು ಇದಕ್ಕೆ ಒಪ್ಪಿಗೆಯನ್ನು ಸೂಚಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಕೆಲವೊಂದು ಸ್ನಾತಕೋತ್ತರ ವಿಭಾಗಗಳಿಗೆ ಆದೇಶವನ್ನೇ ನೀಡಿಲ್ಲವೆಂದು ಅದರಲ್ಲಿ ಕಾನೂನು ಅಧ್ಯಯನ ವಿಭಾಗಕ್ಕೆ ನೀಡಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ ಸ್ಕೂಲ್ ಆಫ್ ಲಾ ವಿಭಾಗದಲ್ಲಿ ಸ್ವಲ್ಪ ಸಮಸ್ಯೆ ಇದೆ. ಪ್ರವೇಶಾತಿ ಶುಲ್ಕವು ಕಡಿಮೆ ಸಂಗ್ರಹವಾಗುತ್ತಿದ್ದು, ಆದರೆ ಇಲ್ಲಿ 22 ಅತಿಥಿ ಉಪನ್ಯಾಸಕರುಗಳಿದ್ದಾರೆ. ಅವರುಗಳಿಗೆ ಎಲ್ಲಿಂದ ವೇತನವನ್ನು ನೀಡುವುದು. ಒಂದು ಅಧ್ಯಯನ ವಿಭಾಗದ ಜವಾಬ್ದಾರಿಯನ್ನು ನೋಡಿಕೊಳ್ಳುವಂತಿದ್ದರೆ ತೊಂದರೆ ಇಲ್ಲಾ, ಎಲ್ಲಾ ಜವಾಬ್ದಾರಿಯನ್ನು ವಿಶ್ವವಿದ್ಯಾನಿಲಯದ ಮೇಲೆ ವಹಿಸುವುದರಿಂದ ತೊಂದರೆಯಾಗುತ್ತಿದೆ. ಸ್ವಯಂ ಆರ್ಥಿಕ ನೆರವಿನಿಂದ ಅತಿಥಿ ಉಪನ್ಯಾಸಕರುಗಳಿಗೆ ವೇತನವನ್ನು ಕೊಡುವಂತಹದು ಹಾಗೂ ಇನ್ನೀತರ ಚಟುವಟಿಕೆಗಳಿಗೆ ಅವರಿಂದಲೇ ಹಣ ಸಂಗ್ರಹವಾದರೆ ಯಾವುದೇ ತೊಂದರೆ ಇರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಹಾಗೆಯೇ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗ ಹೀಗೆ ಕೆಲವೊಂದು ವಿಭಾಗಗಳಲ್ಲಿ ಪ್ರವೇಶಾತಿಯೇ ಕಡಿಮೆ ಇರುತ್ತದೆ. ಆದರೆ ಅಲ್ಲಿ ಕಾರ್ಯನಿರ್ವಹಿಸುವಂತಹ ಸಿಬ್ಬಂದಿಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಇವೆಲ್ಲವು ಆರ್ಥಿಕವಾಗಿ ಮುಂದುವರೆಸಲು ಕಷ್ಟಸಾಧ್ಯವಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಸ್ವಯಂ ಆರ್ಥಿಕ ನೆರವಿನಿಂದ ಆರಂಭವಾದ ವಿಭಾಗಗಳ ಮಾಹಿತಿಯನ್ನು ಪಡೆದು, ಅದರಲ್ಲಿನ ಪ್ರವೇಶಾತಿ ಹಾಗೂ ಇನ್ನಿತರೆ ಖರ್ಚುವೆಚ್ಚಗಳ ಮಾಹಿತಿಯನ್ನು ಪಡೆಯಲು ಒಂದು ಸಮಿತಿಯನ್ನು ರಚಿಸಿ ಅದರ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಿ, ಯಾವ ರೀತಿ ಮುಂದೆ ಅಭಿವೃದ್ಧಿ ಹೊಂದುವುದಕ್ಕೆ ಕ್ರಮವನ್ನು ಅನುಷ್ಠಾನಗೊಳಸಬಹುದು ಎಂಬುದರ ಬಗ್ಗೆ ಮಾಹಿತಿ ದೊರಕಿದಾಗ ವಿಭಾಗಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಹಾಗೂ ಅಧ್ಯಕ್ಷರು